ಕನ್ನಡಪ್ರಭ
ಗುರುವಾರ 7.05.2026

ಗರಿಷ್ಠ 38°C | ಕನಿಷ್ಠ 27°C

ಸುದ್ದಿ ಸಿಂಚನ

ಕನ್ನಡ ಭಾಷೆಯ ಅಸ್ಮಿತೆಗೆ ಕಸಾಪ ಕೊಡುಗೆ ಅಪಾರ


ಹೂವಿನಹಡಗಲಿ: ಕನ್ನಡ ಭಾಷೆ ಭಾಷೆಯ ಅಸ್ಮಿತೆಗೆ ಕಸಾಪ ಕೊಡುಗೆ ಅಪಾರವಾಗಿದೆ. ಕಸಾಪ ಕನ್ನಡ ನೆಲ, ಜಲ, ಭಾಷೆ ಉಳಿವಿಗಾಗಿ ಕಾರ್ಯ ನಿರ್ವಹಿಸುವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿದೆ ಎಂದು ಪ್ರಾಧ್ಯಾಪಕ ಡಾ.ಸತೀಶ್ ಪಾಟೀಲ್ ಹೇಳಿದರು. ಪಟ್ಟಣದ ಜಿಬಿಆರ್‌ಪದವಿ ಮಹಾವಿದ್ಯಾಲಯದಲ್ಲಿ ಕಸಾಪ ತಾಲೂಕು ಘಟಕದಿಂದ ಆಯೋಜಿಸಿದ್ದ ಕಸಾಪ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿ ಕನ್ನಡ ಅಸ್ಮಿತೆ ಕನ್ನಡ ಸಾಹಿತ್ಯ ಪರಿಷತ್ತು ವಿಷಯ ಕುರಿತು ಮಾತನಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ದೂರದೃಷ್ಟಿ ಸರ್‌ಎಂ.ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಪರಿಶ್ರಮದ ಫಲವಾಗಿ ಕಸಾಪ 1915ನೇ ಮೇ 5ರಂದು ಸ್ಥಾಪನೆಯಾಯಿತು. ಕಸಾಪ ಧ್ಯೇಯ, ಉದ್ದೇಶ ತಿಳಿಸಿ ರಾಜ್ಯ ಘಟಕದಿಂದ ಹೋಬಳಿ ಘಟಕದವರೆಗಿನ ಮಾಹಿತಿ ನೀಡಿದರು. ಕಸಾಪ ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸುವುದರ ಜತೆಗೆ ಕಾಲ ಕಾಲಕ್ಕೆ ಸಮ್ಮೇಳನಗಳನ್ನು ಆಯೋಜಿಸಿ, ಪುಸ್ತಕ ಪ್ರಕಟಣೆ ಮಾಡುವುದರ ಮೂಲಕ ನಾಡು- ನುಡಿಯ ಜಾಗೃತಿ ಉಂಟು ಮಾಡಿದೆ. ಈ ಸಂಸ್ಥೆಯು ಸರ್ಕಾರ, ದಾನಿಗಳ ನೆರವಿನಿಂದ ವರ್ಷಪೂರ್ತಿ ನಿರಂತರವಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು. ಜಿಬಿಆರ್ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥ ಡಾ. ವೈ.ಚಂದ್ರಬಾಬು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹಿರೇಹಡಗಲಿಯ ಗ್ರಾಪಂ ನಿವೃತ್ತ ಕಾರ್ಯದರ್ಶಿ ಬಿದರಹಳ್ಳಿ ಚನ್ನವೀರಪ್ಪ, ಪಟ್ಟಣದ ತುಂಗಭದ್ರಾ ವಿದ್ಯಾ ಸಂಸ್ಥೆಯ ಚಿತ್ರಕಲಾ ಶಿಕ್ಷಕ, ಕಲಾವಿದ ಎಸ್.ದ್ವಾರಕೀಶ್ ರೆಡ್ಡಿ ಅವರನ್ನು ಕಸಾಪದಿಂದ ಗೌರವಿಸಲಾಯಿತು. ಸಾಹಿತಿ, ಶಿಕ್ಷಕ ಆರ್.ಬಿ. ಗುರುಬಸವರಾಜ ಪರಿಚಯಿಸಿದರು. ಕಸಾಪ ತಾಲೂಕು ಅಧ್ಯಕ್ಷ ಟಿ.ವೀರೇಂದ್ರ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕ ಪಿ. ಬಸವರಾಜ್ ಪ್ರಾರ್ಥಿಸಿದರು. ಕಸಾಪ ಗೌರವ ಕಾರ್ಯದರ್ಶಿ ಎ.ಎಂ. ಚನ್ನವೀರಸ್ವಾಮಿ ಸ್ವಾಗತಿಸಿದರು. ವಿದ್ಯಾರ್ಥಿ ನಂದೀಶ ಕನ್ನಡ ಗೀತೆ ಹಾಡಿದರು. ಪವಿತ್ರಾ ವಂದಿಸಿದರು. ಪೂಜಾ ಕಡ್ಲಿ ನಿರ್ವಹಿಸಿದರು.

ಪೌರಾಯುಕ್ತರಿಗೆ ಸನ್ಮಾನ

ಸಿರುಗುಪ್ಪ: ನಗರಸಭೆ ಪೌರಾಯುಕ್ತ ಕೆ.ಗಂಗಾಧರ ಜನಗಣತಿ ಕಾರ್ಯದಲ್ಲಿ ಗಣತಿದಾರರ ಮತ್ತು ಮೇಲ್ವಿಚಾರಕರ, ಸಿಬ್ಬಂದಿ ವರ್ಗದ ಹಾಗೂ ಸಾರ್ವಜನಿಕರ ಮಧ್ಯ ಉತ್ತಮ ಸಮನ್ವಯದಿಂದ ಉತ್ತಮ ಕಾರ್ಯದಿಂದ ಯಶಸ್ವಿಯಾಗಿ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಅವರಿಗೆ ಸನ್ಮಾನಿಸಲಾಯಿತು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಕಾರ್ಯದರ್ಶಿ ಡಾ.ಕೆ.ಎಂ.ಚಂದ್ರಕಾಂತ ತಿಳಿಸಿದರು. ನಗರದ ನಗರಸಭೆಯ ಕಾರ್ಯಾಲಯದಲ್ಲಿ ಬುಧವಾರ ಸನ್ಮಾನಿ ಮಾತನಾಡಿದರು. ಟಿ.ಎಚ್.ಎಂ.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಜಿ. ಕೊಟ್ರಪ್ಪ, ಸಹಾಯಕ ಪ್ರಾಧ್ಯಾಪಕ ಕೃಷ್ಣಪ್ಪ, ಗ್ರಂಥಪಾಲಕ ಯಮನೂರಪ್ಪ ಹಾಗೂ ನಗರಸಭೆ ಸಿಬ್ಬಂದಿ ಭಾಗವಹಿಸಿದ್ದರು.

ಶವ ಪತ್ತೆ : ವಾರಸುದಾರರ ಗುರುತಿಗೆ ಮನವಿ

ಹೊಸಪೇಟೆ: ತಾಲೂಕಿನ ಬಿಡಿಸಿಸಿ ಬ್ಯಾಂಕ್ ಕಂಪೌಂಡ್ ಪಕ್ಕದಲ್ಲಿ ಸುಮಾರು 35 ರಿಂದ 40 ವರ್ಷದ ಅನಾಮಧೇಯ ವ್ಯಕ್ತಿಯ ಶವ ಪತ್ತೆಯಾಗಿದ್ದು, ಈ ಘಟನೆ ಕುರಿತು ಹೊಸಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಬಗ್ಗೆ ಮಾಹಿತಿ ತಿಳಿದುಬಂದಲ್ಲಿ ಪಿ.ಐ ಪಟ್ಟಣ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08394224033, 9480805745, ಡಿ.ಎಸ್.ಪಿ. ಹೊಸಪೇಟೆ ದೂ.ಸಂ: 08394224204, 9480805720, ಎಸ್.ಪಿ. ವಿಜಯನಗರ ದೂ.ಸಂ: 9480805700 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಿರುಗುಪ್ಪ ನಗರಸಭೆಯ ಕಾರ್ಯಾಲಯದಲ್ಲಿ ಬುಧವಾರ ಪೌರಾಯುಕ್ತ ಕೆ. ಗಂಗಾಧರ ಅವರನ್ನು ಸನ್ಮಾನಿಸಲಾಯಿತು. ಡಾ. ಕೆ.ಎಂ. ಚಂದ್ರಕಾಂತ, ಜಿ. ಕೊಟ್ರಪ್ಪ, ಕೃಷ್ಣಪ್ಪ, ಯಮನೂರಪ್ಪ ಹಾಗೂ ನಗರಸಭೆ ಸಿಬ್ಬಂದಿ ಭಾಗವಹಿಸಿದ್ದರು.



ಕೊಟ್ಟೂರು ತಾಲೂಕಿನ ವಸತಿ ರಹಿತರಿಗೆ ನಿವೇಶನ ನೀಡಬೇಕೆಂದು ಸಿಪಿಐ ತಾಲೂಕು ಮಂಡಳ ವತಿಯಿಂದ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್.ಎಂ. ಸಂತೋಷ್, ದಲಿತ ಹಕ್ಕುಗಳ ಆಂದೋಲನ ಸಮಿತಿ ಜಿಲ್ಲಾಧ್ಯಕ್ಷ ಕೆ.ಕೊಟ್ರೇಶ್ ಇದ್ದರು.

ವಸತಿ ರಹಿತರಿಗೆ ನಿವೇಶನ ನೀಡಲು ಸಿಪಿಐ ಒತ್ತಾಯ

• **ಕನ್ನಡಪ್ರಭ ವಾರ್ತೆ** ಕೊಟ್ಟೂರು

ವಸತಿ ಮತ್ತು ನಿವೇಶನ ರಹಿತರಿಗೆ ನಿವೇಶನ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಸಿಪಿಐ ತಾಲೂಕು ಮಂಡಳಿಯಿಂದ ಅಧಿಕಾರಿಗಳಿಗೆ ಮಂಗಳವಾರ ಮನವಿ ಸಲ್ಲಿಸಿದರು. ಈ ಸಂಬಂಧ ನಡೆದ ಪ್ರತಿಭಟನೆ, ಒತ್ತಾಯದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್.ಎಂ. ಸಂತೋಷ್, ಹಲವು ದಶಕಗಳಿಂದ ಬಡಜನತೆ ಸ್ವಂತ ಸೂರು ಇಲ್ಲದೇ ಸಂಕಷ್ಟದ ಜೀವನವನ್ನು ಸಾಗಿಸುತ್ತಿದ್ದಾರೆ. ನಿವೇಶನ ಮತ್ತು ವಸತಿಗಾಗಿ ಅರ್ಜಿ ಸಲ್ಲಿಸಿದವರು ಕೇಳಿದರೆ ತಾಂತ್ರಿಕ ಸಮಸ್ಯೆ ಇದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಈ ಸಂಬಂಧ ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಗಮನ ಹರಿಸಿ ಕೂಡಲೇ ಬಡವರಿಗೆ ನಿವೇಶನ ನೀಡಲು ಆದೇಶ ನೀಡಬೇಕೆಂದು ಒತ್ತಾಯಿಸಿದರು. ದಲಿತ ಹಕ್ಕುಗಳ ಆಂದೋಲನ ಸಮಿತಿ ಜಿಲ್ಲಾಧ್ಯಕ್ಷ ಕೆ.ಕೊಟ್ರೇಶ್ ಮಾತನಾಡಿದರು. ತಾಲೂಕು ಕಾರ್ಯದರ್ಶಿ ಕೆ. ರೇಣುಕಮ್ಮ, ದಲಿತ ಹಕ್ಕುಗಳ ಆಂದೋಲನ ಸಮಿತಿ ಅಧ್ಯಕ್ಷ ತೆಗ್ಗಿನಕೇರಿ ಕೊಟ್ರೇಶ್, ದುರುಗಮ್ಮ, ಗೌರಮ್ಮ, ಲಕ್ಷ್ಮಮ್ಮ ಇದ್ದರು.

ವಿಶ್ವವಿಖ್ಯಾತ ಹಂಪಿಯಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ

ಆಸಕ್ತಿ ವಹಿಸದ ರಾಜ್ಯ, ಕೇಂದ್ರ ಪುರಾತತ್ವ, ಹಂಪಿ ಅಭಿವೃದ್ಧಿ ಪ್ರಾಧಿಕಾರ, ಅನುದಾನ ಕೊರತೆ–ಕಾರ್ಮಿಕರ ಅಭಾವ

• **ಸಿ.ಕೆ. ನಾಗರಾಜ**

ಕನ್ನಡಪ್ರಭ ವಾರ್ತೆ ಹೊಸಪೇಟೆ

ವಿಶ್ವವಿಖ್ಯಾತ ಹಂಪಿಯ ವಿರೂಪಾಕ್ಷೇಶ್ವರಸ್ವಾಮಿ ದೇವಸ್ಥಾನ ಮುಂದಿನ ರಸ್ತೆ, ಎದುರು ಬಸವಣ್ಣ ಮಂಟಪ, ತುಂಗಭದ್ರಾ ನದಿ ದಂಡೆ ಪಕ್ಕ ಸೇರಿದಂತೆ ಹಂಪಿ ಸ್ಮಾರಕ, ಮಂಟಪಗಳ ಬಳಿ ಎಲ್ಲೆಂದರಲ್ಲಿ ಕಸದ ರಾಶಿಯೇ ಕಂಡು ಬರುತ್ತಿದೆ.

ಪ್ರವಾಸಿಗರು ಬಹಳ ಇಷ್ಟ ಪಟ್ಟು ಹಂಪಿಗೆ ಬರುತ್ತಾರೆ. ಹಂಪಿಯಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳು ಇಲ್ಲದಿದ್ದರೂ ದೇಶ-ವಿದೇಶದಿಂದ ನಿತ್ಯ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಆದರೆ ಹಂಪಿಯ ಮಂಟಪಗಳ ಬಳಿ, ಸ್ಮಾರಕಗಳ ಬಳಿ ಕಸದ ರಾಶಿಯೇ ಬಿದ್ದಿದೆ. ಆದರೆ ರಾಜ್ಯ ಪುರಾತತ್ವ, ಕೇಂದ್ರ ಪುರಾತತ್ವ, ಹಂಪಿ ಅಭಿವೃದ್ಧಿ ಪ್ರಾಧಿಕಾರಗಳು ಕಸ ತೆಗೆಯಲು, ಸ್ವಚ್ಛವಾಗಿಟ್ಟುಕೊಳ್ಳಲು ಆಸಕ್ತಿ ವಹಿಸಿಲ್ಲ.

ಹಂಪಿಯ ಸ್ಮಾರಕಗಳ ಬಳಿ ಶುಚಿತ್ವ ಕಾಯ್ದುಕೊಂಡು ಪ್ರವಾಸಿಗರ ಮನ ಸೆಳೆಯಬೇಕಾದ ಇಲಾಖೆಗಳೇ ನಿರ್ಲಕ್ಷ್ಯ ವಹಿಸಿವೆ. ಇದರಿಂದ ಹಂಪಿಯು ಕಸದ ತಿಪ್ಪೆಯಾಗುತ್ತಿದೆ. ಹಂಪಿಯ ಮಂಟಪ ಹಾಗೂ ಸ್ಮಾರಕಗಳ ಪ್ರವಾಸಿಗರು ಊಟ ಮಾಡಿ ಬಿಸಾಕಿದ ಊಟದ ಎಲೆಗಳು, ನೀರಿನ ಬಾಟಲಿಗಳು ಸೇರಿದಂತೆ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪೇಪರ್ ಸೇರಿದಂತೆ ಇನ್ನಿತರ ಕಸ ಬಿದ್ದಿರುವುದರಿಂದ ಪ್ರವಾಸಿಗರು ಇಂತಹ ಸ್ಮಾರಕಗಳ ಬಳಿ ಹೆಚ್ಚು ಸಮಯ ಇರುವುದಿಲ್ಲ. ಬೇಸರ ವ್ಯಕ್ತಪಡಿಸುತ್ತಾರೆ. ಆದಷ್ಟು ಬೇಗನೆ ಸ್ಮಾರಕಗಳನ್ನು ವೀಕ್ಷಿಸಿಕೊಂಡು ತೆರಳುತ್ತಾರೆ.

ಡಿಸೆಂಬರ್ ತಿಂಗಳಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಂ ಹಂಪಿಗೆ ಭೇಟಿ ನೀಡಿದಾಗಲೂ ಹಂಪಿಯ ಸ್ಮಾರಕಗಳ ಬಳಿ ಸ್ವಚ್ಛತೆ ಕಾಪಾಡಿಲ್ಲ. ಎಲ್ಲೆಂದರಲ್ಲಿ ಕಸ, ಗಲೀಜು ಇದೆ ಎಂದು ಜಿಲ್ಲಾಡಳಿತದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು.



ಹಂಪಿಯ ಸ್ಮಾರಕಗಳ ಬಳಿ ಮತ್ತು ಮಂಟಪದ ಸಮೀಪ ಹಾಗೂ ತುಂಗಭದ್ರಾ ನದಿ ದಡದಲ್ಲಿ ಕಸ ಎಲ್ಲೆಂದರಲ್ಲಿ ಬಿದ್ದಿದೆ.

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವು ಹಂಪಿಯಲ್ಲಿ ಸ್ವಚ್ಛತಾ ಕಾರ್ಮಿಕರಾಗಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 25 ಜನ ಕಾರ್ಮಿಕರನ್ನು ಏಕಾಏಕಿ ಅನುದಾನದ ಕೊರತೆಯಿಂದಾಗಿ ನಾಲ್ಕೈದು ದಿನಗಳಿಂದ ಕೆಲಸದಿಂದ ಕೈಬಿಟ್ಟಿರುವುದರಿಂದ ಹಂಪಿಯಲ್ಲಿ ಈಗ ಎಲ್ಲೆಂದರಲ್ಲಿ ಕಸದ ರಾಶಿ ಕಂಡು ಬರುತ್ತಿದೆ.

ತಕ್ಷಣವೇ ಗುತ್ತಿಗೆ ಆಧಾರದಲ್ಲಿ ಹಂಪಿಯಲ್ಲಿ ಕೆಲಸ ಮಾಡುತ್ತಿರುವ ಸ್ವಚ್ಛತಾ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಕಾರ್ಮಿಕರ ಮೂರು ತಿಂಗಳ ಬಾಕಿ ವೇತನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಸಿಐಟಿಯುನ ವಿಜಯನಗರ ಜಿಲ್ಲಾ ಸಮಿತಿಯ ಸಂಚಾಲಕಿ ಕೆ.ಎಂ. ಸ್ವಪ್ನ ಮತ್ತು ಜಿಲ್ಲಾ ಸಹ ಸಂಚಾಲಕ ಕೆ.ಎಂ. ಸಂತೋಷಕುಮಾರ್ ನೇತೃತ್ವದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಒಳಗೊಂಡಂತ ನಿಯೋಗ ಸೋಮವಾರ ಕಮಲಾಪುರದಲ್ಲಿರುವ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಆಯುಕ್ತ ರಮೇಶ್ ಅವರಿಗೆ ಮನವಿ ನೀಡಿ ಒತ್ತಾಯಿಸಿದ್ದಾರೆ.

■ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವು ಹಂಪಿಯಲ್ಲಿ ಸ್ವಚ್ಛತಾ ಕಾರ್ಮಿಕರಾಗಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 25 ಜನ ಕಾರ್ಮಿಕರನ್ನು ಏಕಾಏಕಿ ಕೈಬಿಟ್ಟಿದೆ. ಅನುದಾನದ ಕೊರತೆ ಕಾರಣ ನೀಡಿದೆ. ಹೀಗಾಗಿ ನಾಲ್ಕೈದು ದಿನಗಳಿಂದ ಕಾರ್ಮಿಕರ ಅಭಾವ ಉಂಟಾಗಿದೆ. ಸ್ವಚ್ಛತಾ ಕಾರ್ಯ ನಡೆಯುತ್ತಿಲ್ಲ. ಹಂಪಿಯಲ್ಲಿ ಈಗ ಎಲ್ಲೆಂದರಲ್ಲಿ ಕಸದ ರಾಶಿ ಕಂಡು ಬರುತ್ತಿದೆ.

ನಿತ್ಯ ಹಂಪಿಯಲ್ಲಿ ಕೆಲಸ ಮಾಡುವ ಸುಮಾರು 25 ಕಾರ್ಮಿಕರನ್ನು ಅನುದಾನವಿಲ್ಲ ಎಂದು ಕೆಲಸದಿಂದ ತೆಗೆದಿರುವುದು ಸರಿಯಲ್ಲ. ತಕ್ಷಣವೇ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡು ಹಂಪಿಯನ್ನು ಸ್ವಚ್ಛವಾಗಿಡಲು ಮುಂದಾಗಬೇಕು. ಇಲ್ಲವಾದರೆ ಮುಂದಿನ ದಿನಗಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದು.

• **ಕೆ.ಎಂ. ಸಂತೋಷಕುಮಾರ** ಸಿಐಟಿಯುನ ಜಿಲ್ಲಾ ಸಹ ಸಂಚಾಲಕ

ಸಾಂಪ್ರದಾಯಿಕ ಏಕಬೆಳೆ ಪದ್ಧತಿಯಿಂದ ಹೊರಬನ್ನಿ

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಸುಸ್ಥಿರ ಕೃಷಿ, ಮಣ್ಣಿನ ಫಲವತ್ತತೆ ಕಾಪಾಡಿಕೊಳ್ಳಲು ರೈತರು ಸಾಂಪ್ರದಾಯಿಕ ಏಕಬೆಳೆ ಪದ್ಧತಿಯಿಂದ ಹೊರಬಂದು ವೈವಿಧ್ಯಮಯ ಬೆಳೆ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಐಸಿಎಆರ್-ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ರಮೇಶ ಎಂ.ಎನ್. ತಿಳಿಸಿದರು.

ಬಳ್ಳಾರಿಯ ಪ್ರಾದೇಶಿಕ ಕೇಂದ್ರದ ಐಸಿಎಆರ್ -ಐಐಎಸ್‌ಡಬ್ಲ್ಯೂಸಿ ವತಿಯಿಂದ ಬುಡಕಟ್ಟು ಉಪ ಯೋಜನೆಯಡಿ ಸಂಡೂರು ತಾಲೂಕಿನ ಮಟ್ಟಜನಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಮಣ್ಣಿನ ಆರೋಗ್ಯ ಚೇತನಕ್ಕಾಗಿ ವೈವಿಧ್ಯಮಯ ಬೆಳೆ ವ್ಯವಸ್ಥೆಗಳು ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಸಾವಯವ ಗೊಬ್ಬರ ತಯಾರಿಸುವುದು ಮತ್ತು ಬೆಳೆ ಅವಶೇಷಗಳನ್ನು ಸುಡದೇ ಮಣ್ಣಿನಲ್ಲಿ ಸೇರಿಸುವುದು ಮಣ್ಣಿನ ಆರೋಗ್ಯಕ್ಕೆ ಪೂರಕ. ಪಶುಪಾಲನೆ, ಹಸಿರು ಎಲೆ ಗೊಬ್ಬರ ಮತ್ತು ಕೃಷಿ ಅರಣ್ಯ ವ್ಯವಸ್ಥೆಗಳು ರೈತರಿಗೆ ಹೆಚ್ಚುವರಿ ಆದಾಯ ನೀಡುವುದಲ್ಲದೆ, ಹವಾಮಾನ ವೈಪರೀತ್ಯ ಎದುರಿಸಲು ಶಕ್ತಿ ನೀಡುತ್ತವೆ ಎಂದು ತಿಳಿಸಿದರು.

ಹಿರಿಯ ವಿಜ್ಞಾನಿ ಡಾ.ರವಿ ಮಾತನಾಡಿ, ಬೆಳೆ ವೈವಿಧ್ಯೀಕರಣ ಮತ್ತು ಎಫ್‌ವೈಎಂ, ಹಸಿರು ಗೊಬ್ಬರ, ಕಾಂಪೋಸ್ಟ್, ವರ್ಮಿಕಾಂಪೋಸ್ಟ್, ಒಳಚರಂಡಿ ಕೆಸರು ಮತ್ತು ಪ್ರೆಸ್‌ಮಡ್‌ನಂತಹ ಪರ್ಯಾಯ ಪೋಷಕಾಂಶ ಮೂಲಗಳ ಬಳಕೆಯಿಂದ ಇನ್‌ಪುಟ್ ವೆಚ್ಚವನ್ನು ಕಡಿಮೆ ಮಾಡುತ್ತದೆ. ಲಾಭದಾಯಕತೆ ಸುಧಾರಿಸುತ್ತದೆ. ಪೋಷಕಾಂಶಗಳ ಬಳಕೆಯ ದಕ್ಷತೆ ಹೆಚ್ಚಿಸುತ್ತದೆ ಎಂದು ತಿಳಿಸಿದರು.

ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳಲ್ಲಿ ಬೆಳೆ ಸ್ಥಿತಿಸ್ಥಾಪಕತ್ವವನ್ನು ಸುಧಾರಿಸುವಲ್ಲಿ ಮತ್ತು ಇಳುವರಿಯನ್ನು ಸ್ಥಿರಗೊಳಿಸುವಲ್ಲಿ ಅವುಗಳ ಪಾತ್ರ ಬಹುಮುಖ್ಯವಾಗಿದೆ. ವರ್ಮಿಕಾಂಪೋಸ್ಟ್, ಕಾಂಪೋಸ್ಟ್ ಮತ್ತು ಹಸಿರು ಗೊಬ್ಬರದ ಬಳಕೆಯಿಂದ ಕೃಷಿ ವೆಚ್ಚ ತಗ್ಗಿಸಿ ಲಾಭದಾಯಕತೆ ಹೆಚ್ಚಿಸಿಕೊಳ್ಳುವ ವಿಧಾನಗಳನ್ನು ವಿವರಿಸಿದರು.

ಇನ್ನೋರ್ವ ವಿಜ್ಞಾನಿ ಡಾ.ಕವಿತಾ ಪಿ. ಜಾಧವ್ ಮಾತನಾಡಿ, ಜೀವಾಮೃತ, ಬೀಜಾಮೃತ ಮತ್ತು ಮಲ್ಚಿಂಗ್ (ಹೊದಿಕೆ) ಅಳವಡಿಕೆಯಿಂದ ಪರಿಸರ ಸ್ನೇಹಿ ಕೃಷಿಸಾಧ್ಯ. ಸೂಕ್ಷ್ಮ ಪೋಷಕಾಂಶಗಳ ಕೊರತೆ ನೀಗಿಸುವ ಮೂಲಕ ಸುಸ್ಥಿರ ಇಳುವರಿ ಪಡೆಯಬಹುದು ಎಂದು ರೈತರಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ರೈತರಿಗೆ ಸುಧಾರಿತ ತಳಿಯ ತೊಗರಿ ಬೀಜಗಳನ್ನು (ಪಿಆರ್‌ಜಿ-176) ವಿತರಿಸಲಾಯಿತು. ಜಿಪ್ಸಮ್ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ಜಮೀನಿನಲ್ಲಿ ಬಳಸುವ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು. ಗ್ರಾಮದ 40ಕ್ಕೂ ಹೆಚ್ಚು ರೈತರು ಈ ಅಭಿಯಾನದಲ್ಲಿ ಪಾಲ್ಗೊಂಡು ಮಾಹಿತಿ ಪಡೆದರು.



ಸಂಡೂರು ತಾಲೂಕಿನ ಮಟ್ಟಜನಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಮಣ್ಣಿನ ಆರೋಗ್ಯ ಚೇತನಕ್ಕಾಗಿ ವೈವಿಧ್ಯಮಯ ಬೆಳೆ ವ್ಯವಸ್ಥೆಗಳು ಜಾಗೃತಿ ಅಭಿಯಾನದಲ್ಲಿ ಜಿಪ್ಸಮ್ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ಜಮೀನಿನಲ್ಲಿ ಬಳಸುವ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು.

ವಸತಿ ರಹಿತರ ಪಟ್ಟಿಯಲ್ಲಿ ಬಿಟ್ಟು ಹೋಗಿರುವವರ ಸೇರಿಸಲು ಅವಕಾಶ

• **ಕನ್ನಡಪ್ರಭ ವಾರ್ತೆ** ಸಂಡೂರು

ರಾಜೀವಗಾಂಧಿ ವಸತಿ ನಿಗಮದಡಿ 2018ರಲ್ಲಿ ಕೈಗೊಳ್ಳಲಾದ ಸಮೀಕ್ಷೆ ಪಟ್ಟಿಯನ್ನು ಪರಿಷ್ಕರಿಸಿಕೊಳ್ಳಲು ಹಾಗೂ ಅರ್ಹರು ಕಂಡು ಬಂದಲ್ಲಿ ಪಟ್ಟಿಗೆ ಸೇರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರವು2026-27ನೇಆಯವ್ಯಯದಲ್ಲಿ ರಾಜ್ಯದ ವಿವಿಧ ವಸತಿ ಯೋಜನೆಗಳಡಿ ಬಿಎಲ್‌ಸಿ ಆಧಾರಿತ 1 ಲಕ್ಷ ಮನೆಗಳ ಹೊಸ ಗುರಿ ಹಂಚಿಕೆ ಮಾಡಲಾಗಿದೆ. ಈ ಗುರಿಗೆ ಅರ್ಹ ಫಲಾನುಭವಿಗಳನ್ನು ಆಯವ್ಯಯದ ಘೋಷಣೆಯಂತೆ ಆನ್‌ಲೈನ್ ಲಾಟರಿ ಮೂಲಕ ಗ್ರಾಮ ಸಭೆಗಳಲ್ಲಿ ಆಯ್ಕೆಗೊಳಿಸಬೇಕಿದೆ.

ಪ್ರತಿ ಗ್ರಾಪಂ ವಸತಿ ರಹಿತರ ಪಟ್ಟಿಯಲ್ಲಿ ಯಾವುದೇ ವಸತಿ ರಹಿತರು ಬಿಟ್ಟು ಹೋಗದಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕಿದೆ. ಒಂದು ವೇಳೆ ಬಿಟ್ಟು ಹೋಗಿರುವುದು ಕಂಡು ಬಂದಲ್ಲಿ ಪಟ್ಟಿಗೆ ಸೇರಿಸಿಕೊಳ್ಳಲು ಅಥವಾ ಹೊಸದಾಗಿ ಸೇರ್ಪಡೆಗೊಳಿಸುವ ಅವಶ್ಯಕತೆ ಇದ್ದಲ್ಲಿ ಕೂಡಲೇ ಕ್ರಮ ವಹಿಸಬೇಕಿದೆ.

ಅರ್ಹ ವಸತಿ ರಹಿತರ ಪಟ್ಟಿಗೆ ಕೈಬಿಟ್ಟಿರುವ ವಸತಿ ರಹಿತರನ್ನು ಸೇರಿಸಿಕೊಳ್ಳಲು ಮೇ 15ರ ವರೆಗೆ ಕಾಲಾವಕಾಶವನ್ನು ನೀಡಲಾಗಿರುತ್ತದೆ. ತದ ನಂತರ ವಸತಿ ರಹಿತರ ಸೇರ್ಪಡೆಯನ್ನು ಸ್ಥಗಿತಗೊಳಿಸಲಾಗುತ್ತದೆ. ಅಂತಿಮ ದಿನಾಂಕ ಮುಗಿದ ನಂತರದ ವಸತಿ ಮತ್ತು ನಿವೇಶನ ರಹಿತರ ಪಟ್ಟಿಯನ್ನು ಅಂತಿಮ ಪಟ್ಟಿಯೆಂದು ಪರಿಗಣಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

17ಕ್ಕೆ ಪಂಚಮಸಾಲಿ ಪ್ರತಿಭಾ ಪುರಸ್ಕಾರ

• **ಕನ್ನಡಪ್ರಭ ವಾರ್ತೆ** ಹಗರಿಬೊಮ್ಮನಹಳ್ಳಿ

ರಾಜ್ಯದ ಯಾವುದೇ ಜಿಲ್ಲೆಯ ತಾಲೂಕುಗಳಲ್ಲಿ ವ್ಯಾಸಂಗ ಮಾಡಿರುವ ನಮ್ಮ ತಾಲೂಕಿನ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುತ್ತದೆ ಎಂದು ಸಮಾಜದ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ ತಿಳಿಸಿದರು.ಪಟ್ಟಣದ ಕೆಚ್ಚಿನಬಂಡಿ ರಸ್ತೆಯಲ್ಲಿರುವ ಪಂಚಮಸಾಲಿ ಭವನದಲ್ಲಿ ಬುಧವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇದೇ ಮೇ 17ರಂದು ಹಮ್ಮಿಕೊಂಡಿರುವ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಮಾಜದ ತಾಲೂಕು ಘಟಕದಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುತ್ತದೆ ಎಂದು ವಿವರಿಸಿದರು. ಸಮಾಜದ ತಾಲೂಕು ಘಟಕದ ಅಧ್ಯಕ್ಷ ಬಿ.ಮಂಜುನಾಥಗೌಡ ಮಾತನಾಡಿ, ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಆಧಾರ ಕಾರ್ಡ್, ಮತ್ತು 2 ಭಾವಚಿತ್ರಗಳೊಂದಿಗೆ ಪಟ್ಟಣದ ಪಂಚಮಸಾಲಿ ಭವನದ ಕಚೇರಿಯಲ್ಲಿ ಮೇ 12ರೊಳಗೆ ಹೆಸರು ನೋಂದಾಯಿಸಿಕೊಳ್ಳುವಂತೆ ಕೋರಿದರು. ಪುರಸ್ಕಾರ ಸಮಾರಂಭವನ್ನು ಶಾಸಕರಾದ ನೇಮರಾಜ ನಾಯ್ಕ ಉದ್ಘಾಟಿಸುವರು. ಗದ್ದಿಕೇರಿ ವಿರಕ್ತ ಮಠದ ಇಮ್ಮಡಿ ಮಹಾಂತ ಸ್ವಾಮೀಜಿ, ನಿಡಸೋಸಿ ನಿಜಲಿಂಗೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸುತ್ತಾರೆ. ಹೆಚ್ಚಿನ ವಿವರಗಳಿಗೆ ಬಾವಿ ರವೀಂದ್ರ (9880267688) ಮತ್ತು ಶಿವಶಂಕರಗೌಡ (9945903670) ಅವರನ್ನು ಸಂಪರ್ಕಿಸುವಂತೆ ತಿಳಿಸಿದರು. ತಾಲೂಕು ಘಟಕದ ಮಾಜಿ ಅಧ್ಯಕ್ಷ ಅಕ್ಕಿ ಶಿವಕುಮಾರ್, ಕಾರ್ಯದರ್ಶಿ ಶಿವಶಂಕರಗೌಡ, ಉಪಾಧ್ಯಕ್ಷ ಎಂ. ಜ್ಯೋತೆಪ್ಪ, ನೌಕರ ಘಟಕದ ಅಧ್ಯಕ್ಷ ವಿರುಪಾಕ್ಷ, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲಾ ಮೆಣಸಿಗಿ, ನಗರ ಘಟಕದ ಅಧ್ಯಕ್ಷೆ ಮಂಜುಳಾ ವಿರುಪಾಕ್ಷಗೌಡ, ಜಿಲ್ಲಾ ಸಮಿತಿ ಸದಸ್ಯೆ ಮಂಗಳಾ ಬಸವರಾಜ್, ಮುಖಂಡರಾದ ಸಂಚಿ ಶಿವಕುಮಾರ್, ವಿ.ಬಿ.ಮೆಣಸಿಗಿ, ಮಂಜುಳಾ ಬಳಿಗಾರ್, ವೀರೇಶ್, ನವೀನ್, ಸಂತೋಷ್, ಗಂಡಿ ಶ್ರೀಧರ್, ಪಿ.ಬಸವರಾಜ್, ಮಲ್ಲಿಕಾರ್ಜುನ ಗೌಡ, ಬಸವನಗೌಡ ಇದ್ದರು. ತಾಲೂಕು ಕಾರ್ಯದರ್ಶಿ ಬಾವಿ ಶಶಿಧರ್‌ನಿರ್ವಹಿಸಿದರು.

ಆಧಾರ್ ಬಯೋಮೆಟ್ರಿಕ್ ಅಪ್ಡೇಟ್ ಮಾಡಿಸಿ

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಜಿಲ್ಲೆಯಾದ್ಯಂತ 5 ರಿಂದ 17 ವರ್ಷ ವಯೋಮಿತಿಯ ಮಕ್ಕಳಿಗೆ ಕಡ್ಡಾಯ ಬಯೋಮೆಟ್ರಿಕ್ ಅಪ್ಡೇಟ್ ಮಾಡಿಸಲು ಜಿಲ್ಲೆಯ ಎಲ್ಲ ಆಧಾರ್‌ಕೇಂದ್ರಗಳಲ್ಲಿ ಉಚಿತವಾಗಿ ಅವಕಾಶ ಕಲ್ಪಿಸಲಾಗಿದೆ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೆಪ್ಟೆಂಬರ್30ರವರೆಗೆ ಅವಕಾಶ ಕಲ್ಪಿಸಲಾಗಿದೆ. ಮಕ್ಕಳ ಆಧಾರ್ ಕಾರ್ಡ್‌ನಲ್ಲಿ ಬಯೋಮೆಟ್ರಿಕ್ ಮಾಹಿತಿಯನ್ನು ನವೀಕರಿಸುವುದರಿಂದ ಶಾಲಾ ದಾಖಲಾತಿ, ಸ್ಪರ್ಧಾತ್ಮಕ ಪರೀಕ್ಷೆಗಳು, ಸರ್ಕಾರಿ ವಿವಿಧ ಯೋಜನೆಗಳು, ವಿದ್ಯಾರ್ಥಿ ವೇತನ ಸೇರಿದಂತೆ ಶೈಕ್ಷಣಿಕ ಸವಲತ್ತುಗಳ ಲಾಭ ಪಡೆಯಲು ಅಪ್ಡೇಟ್ ಮಾಡುವುದು ಅತ್ಯಗತ್ಯವಾಗಿದೆ. ಪೋಷಕರು ಕೂಡಲೇ ತಮ್ಮ ಮಕ್ಕಳ ಆಧಾರ್‌ಕಾರ್ಡ್ ಹಾಗೂ ಅಗತ್ಯ ದಾಖಲೆಗಳೊಂದಿಗೆ ಹತ್ತಿರದ ಆಧಾರ್‌ಕೇಂದ್ರಗಳಿಗೆ ಭೇಟಿ ನೀಡಿ ಈ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಡಿಸಿ ನಾಗೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಪರಂಪರೆ... ಮಾರುತಿ ತೊಗಲುಗೊಂಬೆ ಕಲಾ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಶೇಷ ಘಟಕ ಯೋಜನೆಯಡಿ ಕಾರ್ಯಕ್ರಮ

ಹಲಕುಂದಿಯಲ್ಲಿ ಗ್ರಾಮೀಣ ಸಾಂಸ್ಕೃತಿಕ ಹಬ್ಬ: ಕಲಾ ಪ್ರದರ್ಶನ

• **ಕನ್ನಡಪ್ರಭ ವಾರ್ತೆ** ಬಳ್ಳಾರಿ

ತಾಲೂಕಿನ ಹಲಕುಂದಿ ಗ್ರಾಮದ ಈಶ್ವರ ದೇವಸ್ಥಾನ ಆವರಣದಲ್ಲಿ ಮಾರುತಿ ತೊಗಲುಗೊಂಬೆ ಕಲಾ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಶೇಷ ಘಟಕ ಯೋಜನೆಯಡಿ ಗ್ರಾಮೀಣ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಉದ್ಘಾಟಿಸಿದ ಉದ್ಯಮಿ ಎಚ್. ತಿಮ್ಮನಗೌಡ ಹಾಗೂ ಗ್ರಾಮದ ಮುಖಂಡ ಗಾದಿಲಿಂಗಪ್ಪ ಗ್ರಾಮೀಣ ಪರಿಸರದಲ್ಲಿ ನಿರಂತರವಾಗಿ ಸಾಂಸ್ಕೃತಿಕ ಹಬ್ಬಗಳು ನಡೆಯುವಂತಾಗಬೇಕು ಎಂದು ಆಶಿಸಿದರು.

ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ. ನಾಗರಾಜ್ ಮಾತನಾಡಿ, ಗ್ರಾಮೀಣ ಭಾರತವು ತನ್ನ ವೈವಿಧ್ಯಮಯ ಸಂಸ್ಕೃತಿ, ಪರಂಪರೆ ಮತ್ತು ಜನಜೀವನದ ವಿಶಿಷ್ಟತೆಗಳಿಂದ ವಿಶ್ವದ ಗಮನ ಸೆಳೆಯುತ್ತದೆ. ಈ ಪರಂಪರೆಯನ್ನು ಜೀವಂತವಾಗಿಟ್ಟುಕೊಳ್ಳುವ ಪ್ರಮುಖ ಸಾಧನವೆಂದರೆ ಗ್ರಾಮೀಣ ಸಾಂಸ್ಕೃತಿಕ ಹಬ್ಬಗಳು. ಇವು ಕೇವಲ ಉತ್ಸವಗಳಲ್ಲ; ಜನರ ಜೀವನಶೈಲಿ, ನಂಬಿಕೆಗಳು, ಕೃಷಿ ಪದ್ಧತಿಗಳು ಮತ್ತು ಸಮುದಾಯದ ಬಾಂಧವ್ಯವನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ವೇದಿಕೆಗಳಾಗಿವೆ ಎಂದು ಹೇಳಿದರು.

ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರಬಂಡೆ ಮಾತನಾಡಿ, ಗ್ರಾಮೀಣ ಸಾಂಸ್ಕೃತಿಕ ಹಬ್ಬಗಳು ಸಾಮಾಜಿಕ ಸಂಬಂಧಗಳನ್ನು ಬಲಪಡಿಸುವಲ್ಲಿಮಹತ್ವದಪಾತ್ರವಹಿಸುತ್ತವೆ. ದೂರದ ಬಂಧು-ಬಳಗಗಳು ಒಂದಾಗಿ ಸೇರಿ ಸಂತೋಷವನ್ನು ಹಂಚಿಕೊಳ್ಳುತ್ತಾರೆ. ಹೊಸ ತಲೆಮಾರಿನವರಿಗೆ ಸಂಪ್ರದಾಯಗಳನ್ನು ಪರಿಚಯಿಸುವಲ್ಲಿ ಇವು ಮಹತ್ವದ್ದಾಗಿವೆ. ಹಿರಿಯರಿಂದ ಕಿರಿಯರಿಗೆ ಮೌಲ್ಯಗಳು, ಸಂಸ್ಕೃತಿ ಮತ್ತು ನಂಬಿಕೆಗಳು ಹಸ್ತಾಂತರವಾಗುವ ಅವಕಾಶವೂ ಹಬ್ಬಗಳ ಮೂಲಕ ಸಿಗುತ್ತದೆ ಎಂದು ಹೇಳಿದರು.

ಆಧುನಿಕ ಜೀವನಶೈಲಿಯ ಪರಿಣಾಮದಿಂದ ಕೆಲವೆಡೆ ಈ ಹಬ್ಬಗಳ ಮಹತ್ವ ಕಡಿಮೆಯಾಗುತ್ತಿವೆ. ನಗರೀಕರಣ, ತಂತ್ರಜ್ಞಾನ ಮತ್ತು ಉದ್ಯೋಗದ ಹಿನ್ನೆಲೆಯಲ್ಲಿ ಯುವಕರು ಗ್ರಾಮಗಳನ್ನು ತೊರೆಯುತ್ತಿರುವುದರಿಂದ ಸಂಪ್ರದಾಯಗಳು ನಿಧಾನವಾಗಿ ಮರೆಯಾಗುವ ಭೀತಿ ಇದೆ. ಈ ಹಬ್ಬಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಗ್ರಾಮೀಣ ಸಾಂಸ್ಕೃತಿಕ ಹಬ್ಬಗಳುನಮ್ಮಸಂಸ್ಕೃತಿಯಜೀವಾಳವಾಗಿದೆ. ಅವುಗಳನ್ನು ಕಾಪಾಡಿ ಮುಂದಿನ ಪೀಳಿಗೆಗೆ ತಲುಪಿಸುವುದು ಅತ್ಯಂತ ಅಗತ್ಯ. ಇವು ನಮ್ಮ ಗುರುತು, ನಮ್ಮ ಹೆಮ್ಮೆ ಮತ್ತು ನಮ್ಮ ಪರಂಪರೆಯ ಸಂಕೇತಗಳಾಗಿವೆ ಎಂದು ತಿಳಿಸಿದರು.

ಗ್ರಾಮದ ಪ್ರಮುಖರಾದ ಎಚ್.ಆರ್ ಮಲ್ಲನಗೌಡ, ಮಲ್ಲಿಕಾರ್ಜುನ ಗೌಡ, ಭೀಮರೆಡ್ಡಿ, ಚಂದ್ರಶೇಖರ, ಕೇಶವ, ಪಿ. ಗವಿಸಿದ್ದಪ್ಪ, ಬಿ.ಎಂ.ಪಾಟೀಲ್, ಪಿ.ಸಿದ್ದಪ್ಪ, ಯಲ್ಲಪ್ಪ ನಾಯಕ, ಟಿ.ಚಂದ್ರಶೇಖರ, ಆಲಂಬಾಷ ಮತ್ತಿತರರಿದ್ದರು. ಯರಗುಡಿ ಎಚ್.ಜಿ ಸುಂಕಪ್ಪ ತಂಡದಿಂದ ಜನಪದ, ಸಿರುಗುಪ್ಪದ ದಳವಾಯಿ ಅಂಬಣ್ಣ ತಂಡದಿಂದ ಸುಗಮ ಸಂಗೀತ, ಅನ್ನಪೂರ್ಣಾ ತಂಡದಿಂದ ರಂಗಗೀತೆಗಳು, ಹೆಚ್. ಹನುಮಂತಪ್ಪ ತಂಡದಿಂದ ದ್ರೌಪದಿ ವಸ್ತ್ರಾಪರಣ ಪೌರಾಣಿಕ ನಾಟಕ ಪ್ರದರ್ಶನ ಜರುಗಿದವು. ಮಾರುತಿ ತೊಗಲುಗೊಂಬೆ ಕಲಾ ಟ್ರಸ್ಟ್ ಅಧ್ಯಕ್ಷ ಸುಬ್ಬಣ್ಣ ಹಾಗೂ ಟ್ರಸ್ಟಿನ ಕಾರ್ಯದರ್ಶಿ ಸಿ. ತುಳಸಿ ಕಾರ್ಯಕ್ರಮ ನಿರ್ವಹಿಸಿದರು.



ಹಲಕುಂದಿ ಗ್ರಾಮದ ಈಶ್ವರ ದೇವಸ್ಥಾನ ಆವರಣದಲ್ಲಿ ಗ್ರಾಮೀಣ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮಕ್ಕೆ ಗ್ರಾಮದ ಮುಖಂಡರು ಚಾಲನೆ ನೀಡಿದರು.

ಗಣಿಬಾಧಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ, ಅಲ್ಲಿನ ನಿವಾಸಿಗಳ ಪುನಶ್ಚೇತನಕ್ಕಾಗಿ ಗಣಿ ಪರಿಸರ ಪುನಶ್ಚೇತನ ನಿಗಮದಿಂದ ₹1,146 ಕೋಟಿ ವೆಚ್ಚದಲ್ಲಿ ಫಲಾನುಭವಿಗಳಿಗೆ ಮೂಲಭೂತ ಸೌಕರ್ಯ ಒಳಗೊಂಡ ಸುಸಜ್ಜಿತ ವಸತಿ ಸೌಲಭ್ಯ ಕಲ್ಪಿಸಿಕೊಡಲಾಗುವುದು.
• **ಕವಿತಾ ಎಸ್. ಮನ್ನಿಕೇರಿ** ಜಿಲ್ಲಾಧಿಕಾರಿ

ಸುದ್ದಿ ಸಿಂಚನ

ಪೊಲೀಸ್ ವಸತಿಗೃಹಕ್ಕೆ ಭೂಮಿಪೂಜೆ

ಹೊಸಪೇಟೆ: ನಗರದ ಡಿಆರ್‌ಮೈದಾನದಲ್ಲಿ ₹6.69 ಕೋಟಿ ವೆಚ್ಚದ ಪೊಲೀಸ್ ವಸತಿ ಗೃಹಗಳಿಗೆ ಶಾಸಕ ಎಚ್.ಆರ್. ಗವಿಯಪ್ಪ ಮಂಗಳವಾರ ಭೂಮಿ ಪೂಜೆ ನೆರವೇರಿಸಿದರು.12 ಪಿಸಿ, 6 ಎಸ್ಐ ವಸತಿ ಗೃಹಗಳಿಗೆ ಭೂಮಿಪೂಜೆ ನೆರವೇರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈವರೆಗೆ 36 ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಈಗ 18 ವಸತಿ ಗೃಹಗಳಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ನಗರದಲ್ಲಿ ಮಹಿಳಾ ಪೊಲೀಸ್ ಠಾಣೆ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದರು. ಎಸ್ಪಿ ಎಸ್. ಜಾಹ್ನವಿ, ಅಡಿಷನಲ್ ಎಸ್ಪಿ ಜಿ.ಮಂಜುನಾಥ, ಡಿವೈಎಸ್ಪಿ ಡಾ.ಟಿ. ಮಂಜುನಾಥ, ಪಿಐಗಳಾದ ಡಿ.ಹುಲುಗಪ್ಪ, ಮಹಮದ್ ಗೌಸ್, ಫೈಜುಲ್ಲ, ಗುರುರಾಜ್ ಕಟ್ಟಿಮನಿ, ಸೋಮ್ಲನಾಯ್ಕ, ಗೋವಿಂದ್, ದೇವರಮನಿ ಬಸವರಾಜ, ಗುಜ್ಜಲ್ ನಿಂಗಪ್ಪ, ಗಿಂಜಿ ಮಂಜುನಾಥ, ತಳವಾರ ನಾಗರಾಜ, ಧನಲಕ್ಷ್ಮಿ, ಬಿ. ಚಂದ್ರಶೇಖರ್‌ಇದ್ದರು.

ಕರಡಿಗಳ ಓಡಾಟ- ಆತಂಕದಲ್ಲಿ ಗ್ರಾಮಸ್ಥರು

ಸಂಡೂರು: ತಾಲೂಕಿನ ತೋರಣಗಲ್ಲು ಹೋಬಳಿ ವ್ಯಾಪ್ತಿಯ ಸುಲ್ತಾನಾಪುರದಲ್ಲಿ ಮಂಗಳವಾರ ರಾತ್ರಿ ಎರಡು ಕರಡಿಗಳು ಓಡಾಡಿದ ದೃಶ್ಯವು ಗ್ರಾಮದ ಯುವಕರ ಮೊಬೈಲ್‌ನಲ್ಲಿ ದಾಖಲಾಗಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಗ್ರಾಮದ ಮುಖಂಡ ಜಂಬಯ್ಯ ಮಾತನಾಡಿ, ಗ್ರಾಮದ ಸುತ್ತಲಿನ ರೈತರ ಜಮೀನುಗಳು, ಸರ್ಕಾರಿ ಗೋಮಾಳ, ಕಣಗಿನ ಹಳ್ಳ ಮುಂತಾದೆಡೆ ಕರಡಿಗಳು ಆಗಾಗ್ಗೆ ಕಾಣಿಸಿಕೊಳ್ಳುತ್ತಿವೆ. ಮಂಗಳವಾರ ರಾತ್ರಿ ಎರಡು ಕರಡಿಗಳು ಗ್ರಾಮದ ಶ್ರೀಆಂಜನೇಯ ದೇವಸ್ಥಾನ ಹಾಗೂ ಇತರೆ ಪ್ರದೇಶಗಳಲ್ಲಿ ತಿರುಗಾಡಿದ್ದು, ಗ್ರಾಮದ ಯುವಕರು ಅವುಗಳ ಓಡಾಟವನ್ನು ಮೊಬೈಲ್‌ಗಳಲ್ಲಿ ದಾಖಲಿಸಿಕೊಂಡಿದ್ದಾರೆ.

ಬಾಲ್ಯವಿವಾಹಕ್ಕೆ ತಡೆ

ಸಿರುಗುಪ್ಪ: ತಾಲೂಕಿನ ಶ್ರೀಧರಗಡ್ಡೆ ಗ್ರಾಮದಲ್ಲಿ ನಡೆಯಲಿದ್ದ ಬಾಲ್ಯವಿವಾಹವನ್ನು ಅಧಿಕಾರಿಗಳು ಬುಧವಾರ ಕಾರ್ಯಾಚರಣೆ ನಡೆಸಿ ತಡೆದಿದ್ದಾರೆ. ಮಕ್ಕಳ ಸಹಾಯವಾಣಿ 1098ಗೆ ಬಂದ ಖಚಿತ ಮಾಹಿತಿ ಆಧರಿಸಿ, ಕಾರ್ಯಾಚರಣೆಯಲ್ಲಿ ಮೇ 13ರಂದು ಸಿಂಧನೂರು ತಾಲೂಕಿನಲ್ಲಿ ನಡೆಯಲು ನಿಶ್ಚಯವಾಗಿತ್ತು. ಬಾಲಕಿಗೆ 15 ವರ್ಷ 8 ತಿಂಗಳು ವಯಸ್ಸಾಗಿತ್ತು. ಬಾಲ್ಯ ವಿವಾಹ ತಡೆಯಲಾಗಿದೆ. ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕ ಪ್ರದೀಪ ಜಿ., ಮೇಲ್ವಿಚಾರಕಿ ರೇಖಾ ರಾಣಿ, ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು.


ಹೊಸಪೇಟೆ ನಗರದ ಡಿಆರ್‌ಮೈದಾನದಲ್ಲಿ ಪೊಲೀಸ್ ವಸತಿಗೃಹಗಳಿಗೆ ಶಾಸಕ ಎಚ್.ಆರ್. ಗವಿಯಪ್ಪ ಭೂಮಿಪೂಜೆ ನೆರವೇರಿಸಿದರು. ಎಸ್ಪಿ ಎಸ್. ಜಾಹ್ನವಿ, ಅಡಿಷನಲ್ ಎಸ್ಪಿ ಜಿ. ಮಂಜುನಾಥ, ಡಿವೈಎಸ್ಪಿ ಡಾ.ಟಿ. ಮಂಜುನಾಥ, ಪಿಐ ಡಿ.ಹುಲುಗಪ್ಪ ಇದ್ದರು.


ತೆಕ್ಕಲಕೋಟೆ ಸಮೀಪದ ನಿಟ್ಟೂರು ಗ್ರಾಮದ ಬಳಿಯ ಹೊಲದಲ್ಲಿ ಬಂಡೆಗಲ್ಲು ಶಾಸನವನ್ನು ಸಂಶೋಧನಾರ್ಥಿಗಳಾದ ಅಶೋಕ್ ಅಬಕಾರಿ, ಮನೋಹರ, ಧಾರವಾಡದ ಲಿಪಿತಜ್ಞ ಮಾರುತಿ ಭಜಂತ್ರಿ, ಹಿರೇಬೆಣಕಲ್ ಮಂಜುನಾಥ ದೊಡ್ಡಮನಿ ಪತ್ತೆ ಹಚ್ಚಿದ್ದಾರೆ.


ಹೂವಿನಹಡಗಲಿ ತಾಲೂಕಿನ ಉತ್ತಂಗಿಯಲ್ಲಿ ಬಿಡಿಸಿಸಿ ಬ್ಯಾಂಕಿನ ನೂತನ ಶಾಖೆಯನ್ನು ಶಾಸಕ ಕೃಷ್ಣನಾಯ್ಕ ಉದ್ಘಾಟಿಸಿದರು. ಈ ವೇಳೆ ಬ್ಯಾಂಕಿನ ಉಪಾಧ್ಯಕ್ಷ ಐ.ದಾರುಕೇಶ, ನಿರ್ದೇಶಕ ಐಗೋಳ್ ಚಿದಾನಂದ, ಉತ್ತಂಗಿ ಸೋಮಶಂಕರ ಸ್ವಾಮೀಜಿ ಇದ್ದರು.

ಅದಿರು ಲಾರಿ ಸಂಚಾರಕ್ಕೆ ತಡೆ

ಅದಿರು ಸಾಗಾಟ ಕೆಲಸವನ್ನು ಸ್ಥಳೀಯ ಟ್ರಾನ್ಸ್‌ಪೋರ್ಟರ್‌ಗೆ ನೀಡಲು ಒತ್ತಾಯ


ಪ್ರತಿಭಟನೆ ಹಿನ್ನೆಲೆ ಸಾಲುಗಟ್ಟಿ ನಿಂತ ಅದಿರು ಸಾಗಣೆ ಲಾರಿ


ಗಣಿ ಅದಿರು ಸಾಗಣೆ ಗುತ್ತಿಗೆದಾರರ ಸಂಘದಿಂದ ತಹಶೀಲ್ದಾರ್ ಸುಧಾ ಅರಮನೆಗೆ ಮನವಿ ಸಲ್ಲಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಸಂಡೂರು

ತಾಲೂಕಿನ ಗಣಿಗಳಿಂದ ಅದಿರು ಖರೀದಿಸುವ ಕಂಪನಿಗಳು ತಮ್ಮ ಕಾರ್ಖಾನೆಗಳಿಗೆ ಅದಿರು ಸಾಗಿಸುವ ಗುತ್ತಿಗೆಯನ್ನು ಸ್ಥಳೀಯ ಗುತ್ತಿಗೆದಾರರಿಗೆ ನೀಡಬೇಕು. ಕರ್ನಾಟಕ ಇಂಡಸ್ಟ್ರಿಯಲ್ ಪಾಲಿಸಿ 2025ನ್ನು ಪಾಲಿಸಬೇಕು ಎಂದು ಒತ್ತಾಯಿಸಿ ಸಂಡೂರು ತಾಲೂಕು ಗಣಿ ಅದಿರು ಸಾಗಣೆ ಗುತ್ತಿಗೆದಾರರ ಸಂಘದ ಮುಖಂಡರು ಬುಧವಾರ ತಾಲೂಕಿನಾದ್ಯಂತ ಅದಿರು ಸಾಗಣೆ ಲಾರಿಗಳ ಸಂಚಾರ ತಡೆದು ಪ್ರತಿಭಟನೆ ನಡೆಸಿದರು.

ತಮ್ಮ ಬೇಡಿಕೆಗಳ ಮನವಿ ಪತ್ರವನ್ನು ಗ್ರೇಡ್ 2 ತಹಶೀಲ್ದಾರ್‌ಸುಧಾ ಅರಮನೆ ಅವರಿಗೆ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಜಯಣ್ಣ ನವಲೂಟಿ, ಅದಿರು ಸಾಗಾಣಿಕೆ ದರದಲ್ಲಿ ಜಿಂದಾಲ್ ಕಂಪನಿಯು ನಿಗದಿ ಪಡಿಸಿರುವ ಪ್ರತಿ ಟನ್, ಪ್ರತಿ ಕಿ.ಮೀ.ನಂತೆ ದರ ನಿಗದಿ ಮಾಡಬೇಕು. ತಾಲೂಕಿನ ಗಣಿಗಳಿಗೆ ಅದಿರು ಖರೀದಿಸುವ ಕಂಪನಿಗಳು ಗಣಿ ಬಾಧಿತ ಪ್ರದೇಶಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಬೇಕು. ಅವರ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಕಲ್ಪಿಸಬೇಕು. ಹೊಸ ಇಂಡಸ್ಟ್ರಿಯಲ್ ಪಾಲಿಸಿ ಪ್ರಕಾರ ಸ್ಥಳೀಯ ಅದಿರು ಸಾಗಾಣಿಕೆದಾರರಿಗೆ ಮೊದಲ ಆದ್ಯತೆ ನೀಡಬೇಕು. ಕಾರ್ಖಾನೆಗಳು ನಿಗದಿ ಪಡಿಸಿದ ದರ ಮತ್ತು ಲಾಭಾಂಶದಲ್ಲಿ ಯಾವುದೇ ವ್ಯತ್ಯಾಸ ಅಥವಾ ಸ್ಪರ್ಧೆ ಮಾಡದೆ, ಸಾಗಾಣಿಕೆ ಗುತ್ತಿಗೆ ನೀಡತಕ್ಕದ್ದು ಎಂದರು.

■ **ಹೊಸ ಇಂಡಸ್ಟ್ರಿಯಲ್ ಪಾಲಿಸಿ ಪ್ರಕಾರ ಸ್ಥಳೀಯ ಅದಿರು ಸಾಗಾಣಿಕೆದಾರರಿಗೆ ಮೊದಲ ಆದ್ಯತೆ ನೀಡಬೇಕು.**

ಕಾರ್ಖಾನೆಯ ಮಾಲೀಕರು ಯಾವುದೇ ಲಾಬಿಗೆ ಮಣಿದು ಕಡಿಮೆ ದರದಲ್ಲಿ ಸಾಗಾಣಿಕೆ ಮಾಡುವವರಿಗೆ ಅವಕಾಶ ಮಾಡಿಕೊಡಬಾರದು. ಕಾರ್ಖಾನೆಯವರು ಸ್ವಂತ ಗಣಿಗಳನ್ನು ಹೊಂದಿದ್ದಲ್ಲಿ ಅದಿರು ಸಾಗಾಣಿಕೆ ಮಾಡಲು ಸ್ಥಳೀಯರಿಗೆ ಅವಕಾಶ ನೀಡಬೇಕು ಎಂಬುದು ನಮ್ಮ ಬೇಡಿಕೆಗಳಾಗಿವೆ. ಈಗಾಗಲೇ ಈ ಬೇಡಿಕೆಗಳ ಕುರಿತು ಕಾರ್ಖಾನೆಗಳವರಿಗೆ ತಿಳಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ, ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ರಾಜ್ಯ ಖನಿಜ ನಿಗಮದ ಉಪಾಧ್ಯಕ್ಷ ಎಚ್.ಲಕ್ಷ್ಮಣ, ಅದಿರು ಸಾಗಣೆ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಅನಿಲ್ ನಿಕ್ಕಂ, ಸಂಡೂರು ಘಟಕದ ಉಪಾಧ್ಯಕ್ಷರಾದ ವಾಮದೇವ ಮದ್ದಾನಿ, ಈಶಣ್ಣ ಉಬ್ಬಲಗಂಡಿ, ತಿಮ್ಮಪ್ಪ ತಾರಾನಗರ, ರಾಘವೇಂದ್ರ ನಾಯಕ್, ಮುಖಂಡರಾದ ಬಿ.ಜಿ. ಸಿದ್ದನಗೌಡ, ಕಿರಣ್, ಮಲ್ಲಿಕಾರ್ಜುನ ಕಾಳಿಂಗೇರಿ, ಫಕ್ಕೀರಪ್ಪ, ನಾಗರಾಜ್, ಓಬಳೇಶ್, ಆರ್.ಕೆ. ಹೆಗಡೆ, ಮರಿಸ್ವಾಮಿ, ಚಂದ್ರಾನಾಯ್ಕ್, ಜೆಬಿಟಿ ಬಸವರಾಜ್, ರಮೇಶ್ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಆರ್ಥಿಕ ಸಬಲೀಕರಣಕ್ಕೆ ಬಿಡಿಸಿಸಿ ಬ್ಯಾಂಕ್ ಸಹಕಾರಿ



ಬಿಡಿಸಿಸಿ ಬ್ಯಾಂಕಿನ ನೂತನ ಶಾಖೆಯನ್ನು ಉದ್ಘಾಟಿಸಿ ಶಾಸಕ ಕೃಷ್ಣ ನಾಯ್ಕ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಹೂವಿನಹಡಗಲಿ

ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಬಿಡಿಸಿಸಿ) ಉತ್ತಮ ಕಾರ್ಯ ನಿರ್ವಹಣೆ ಮಾಡಿ, ವಾರ್ಷಿಕ ₹3500 ರಿಂದ ₹4000 ಕೋಟಿ ವಹಿವಾಟು ಮಾಡಿದೆ. ರೈತರಿಗೆ, ಸಣ್ಣ ವ್ಯಾಪಾರಸ್ಥರಿಗೆ ಸಕಾಲದಲ್ಲಿ ಸಾಲ ನೀಡಿ, ನಿಗದಿತ ಸಮಯದೊಳಗೆ ಮರುಪಾವತಿ ಮಾಡಿ ಉತ್ತಮ ಹೆಸರು ಗಳಿಸಿದೆ ಎಂದು ಶಾಸಕ ಕೃಷ್ಣನಾಯ್ಕ ಹೇಳಿದರು.

ತಾಲೂಕಿನ ಉತ್ತಂಗಿ ಗ್ರಾಮದಲ್ಲಿ ಬಿಡಿಸಿಸಿ ಬ್ಯಾಂಕಿನ 34ನೇ ಶಾಖೆ, ಎಟಿಎಂ ಕೇಂದ್ರ, ಕಾಮನ್ ಸರ್ವೀಸ್ ಸೆಂಟರ್ ಉದ್ಘಾಟಿಸಿ ಮಾತನಾಡಿದರು. ಇಬಿಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಐ. ದಾರುಕೇಶ ಮಾತನಾಡಿ, ರೈತ ಸಮುದಾಯಕ್ಕೆ ಆರ್ಥಿಕವಾಗಿ ಅನುಕೂಲವಾಗಲು ಹೊಸ ಯೋಜನೆಗಳನ್ನು ಜಾರಿಗೆ ಮಾಡುತ್ತಿದ್ದೇವೆ. ಇನ್ನು ಹಲವು ಕಡೆಗಳಲ್ಲಿ ನೂತನ ಶಾಖೆಗಳನ್ನು ಆರಂಭಿಸುವ ಚಿಂತನೆ ಇದೆ ಎಂದರು.

ಶಾಸಕಿ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕಿ ಲತಾ ಮಲ್ಲಿಕಾರ್ಜುನ ಮಾತನಾಡಿ, ಸೊಸೈಟಿ ಹಾಗೂ ಬ್ಯಾಂಕುಗಳಲ್ಲಿ ಪಡೆದ ಸಾಲ ಸಕಾಲದಲ್ಲಿ ಮರು ಪಾವತಿಯಿಂದ ಸಹಕಾರಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಬಿಡಿಸಿಸಿ ಬ್ಯಾಂಕ್ ರಾಜ್ಯದಲ್ಲೇ ಉತ್ತಮ ಸಾಧನೆ ಮಾಡಿದೆ ಎಂದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಐಗೋಳ್ ಚಿದಾನಂದ ಮಾತನಾಡಿ, ತಾಲೂಕಿನ 19 ಸಹಕಾರಿ ಸಂಘಗಳು ಸುಸ್ಥಿಯಲ್ಲಿವೆ. ಉತ್ತಂಗಿ ಸೊಸೈಟಿಯಲ್ಲಿ ₹24 ಕೋಟಿ ಠೇವಣಿ ಇದೆ. ₹14 ಕೋಟಿ ಕೆಸಿಸಿ ಸಾಲ, ₹18 ಕೋಟಿ ಬಿಡಿಪಿ ಸಾಲವಿದೆ ಎಂದರು.

ಉತ್ತಂಗಿ ಸೋಮಶಂಕರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕರಾದ ಪಿ. ವಿಜಯಕುಮಾರ, ತಿಪ್ಪೇಸ್ವಾಮಿ, ಟಿ.ಎಂ. ಚಂದ್ರಶೇಖರಯ್ಯ, ಚೊಕ್ಕ ಬಸವನಗೌಡ, ಆನಂದ, ಸಂದೀಪ ಸಿಂಗ್, ಮೂಕಯ್ಯ ಸ್ವಾಮಿ, ವೈ. ಅಣ್ಣಪ್ಪ, ಹುಲುಗಪ್ಪ, ಮುಖ್ಯ ಕಾರ್ಯನಿರ್ವಾಹಕ ಜಯಪ್ರಕಾಶ್, ಕನಕದಾಸ ಕುರಿ ಉಣ್ಣೆ ಸಹಕಾರ ಸಂಘದ ಅಧ್ಯಕ್ಷ ಕೆ.ಜಿ. ಹನುಮಂತಪ್ಪ, ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ಗೌರಮ್ಮ ಉಪಸ್ಥಿತರಿದ್ದರು.

ಗಣಿಬಾಧಿತ ಪ್ರದೇಶ ಅಭಿವೃದ್ಧಿಗೆ ₹1146 ಕೋ. ವೆಚ್ಚದ ಯೋಜನೆ

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ಗಣಿಬಾಧಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ ಹಾಗೂ ಅಲ್ಲಿನ ನಿವಾಸಿಗಳ ಪುನಶ್ಚೇತನಕ್ಕಾಗಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ ವತಿಯಿಂದ ಸುಮಾರು ₹1,146 ಕೋಟಿ ವೆಚ್ಚದಲ್ಲಿ ಅರ್ಹ ಫಲಾನುಭವಿಗಳಿಗೆ ಎಲ್ಲ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸುಸಜ್ಜಿತ ವಸತಿ ಸೌಲಭ್ಯ ಕಲ್ಪಿಸಿಕೊಡಲಾಗುವುದು ಎಂದು ಡಿಸಿ ಕವಿತಾ ಮನ್ನಿಕೇರಿ ಹೇಳಿದರು.



ನಗರದ ಜಿಲ್ಲಾಧಿಕಾರಿ ವಿ.ಸಿ. ಹಾಲ್‌ನಲ್ಲಿ ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ ಯೋಜನೆಯಡಿ ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿ ಕುರಿತು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗಣಿಬಾಧಿತ ಪ್ರದೇಶಗಳ ಪುನಶ್ಚೇತನ ಯೋಜನೆ ಅತ್ಯಂತ ಮಹತ್ವದ್ದಾಗಿದ್ದು, ಇದರಲ್ಲಿ ಯಾವುದೇ ರೀತಿಯ ವಿಳಂಬ ಅಥವಾ ಸಮನ್ವಯತೆಯ ಕೊರತೆ ಸಹಿಸುವುದಿಲ್ಲ ಎಂದು ಜಿಲ್ಲಾಧಿಕಾರಿ ಎಚ್ಚರಿಕೆ ನೀಡಿದ್ದಾರೆ.

ವಸತಿ ಸಂಕೀರ್ಣಗಳ ನಿರ್ಮಾಣದ ವೇಳೆ ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ಇರಬೇಕು. ರಸ್ತೆ ನಿರ್ಮಾಣವಾದ ಆನಂತರ ಪೈಪ್‌ಲೈನ್‌ಗಾಗಿ ರಸ್ತೆ ಅಗೆಯುವಂತಹ ತಪ್ಪುಗಳು ಮರುಕಳಿಸಬಾರದು. ಪ್ರತಿ ಹಂತದಲ್ಲೂ ಕಾಮಗಾರಿ ಗುಣಮಟ್ಟ ಪರಿಶೀಲಿಸಬೇಕು. ಕೇವಲ ಮನೆ ಕಟ್ಟುವುದಷ್ಟೇ ನಮ್ಮ ಗುರಿಯಲ್ಲ, ಮನೆಗಳು ವಾಸಕ್ಕೆ ಸಿದ್ಧವಾಗುವ ಮುನ್ನವೇ ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ವ್ಯವಸ್ಥೆ ಸಂಪೂರ್ಣವಾಗಿ ಸಿದ್ಧವಿರಬೇಕು ಎಂದರು.

1183 ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾಗಬಾರದು. ಅರ್ಹ ಗಣಿ ಬಾಧಿತ ಕುಟುಂಬಗಳಿಗೆ ಮಾತ್ರ ಈ ಸೌಲಭ್ಯ ತಲುಪುವಂತೆ ಹಾಗೂ ಯಾವೊಬ್ಬ ಅರ್ಹ ಫಲಾನುಭವಿಯೂ ಯೋಜನೆಯಿಂದ ಹೊರಗುಳಿಯಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಜಿಲ್ಲಾ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಮನೋಹರ್, ಉಪವಿಭಾಗಾಧಿಕಾರಿ ವಿವೇಕಾನಂದ, ತಹಸೀಲ್ದಾರ್ ಶ್ರುತಿ ಎಂ., ನಗರಸಭೆ ಪೌರಾಯುಕ್ತ ಶಿವಕುಮಾರ್‌ಉಪಸ್ಥಿತರಿದ್ದರು.

ಕಿಡ್ನಿ ವೈಫಲ್ಯ: ಬಡ ಯುವಕನಿಗೆ ಆರ್ಥಿಕ ನೆರವು ನೀಡಲು ಮನವಿ

• **ಕನ್ನಡಪ್ರಭ ವಾರ್ತೆ** ಹರಪನಹಳ್ಳಿ

ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವ ತಾಲೂಕಿನ ಬಡ ಕುಟುಂಬದ ಯುವಕನೊಬ್ಬ ಮಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದು, ತುರ್ತು ಶಸ್ತ್ರಚಿಕಿತ್ಸೆಗೆ ಲಕ್ಷಾಂತರ ಹಣ ಆಗತ್ಯವಿದೆ. ಆರ್ಥಿಕ ನೆರವು ನೀಡುವಂತೆ ದಾನಿಗಳಲ್ಲಿ ಮನವಿ ಮಾಡಿದ್ದಾನೆ. ತಾಲೂಕಿನ ಅರೇಮಜ್ಜಿಗೇರಿ ಗ್ರಾಮದ ಭೋವಿ ದುರುಗಪ್ಪ, ಹುಲಿಗೆಮ್ಮ ದಂಪತಿಯ ಕಿರಿಯ ಪುತ್ರ ಭೋವಿ ಯೋಗೇಶ್(21) ಈತನಿಗೆ ಎರಡೂ ಕಿಡ್ನಿಗಳು ಚಿಕ್ಕ ವಯಸ್ಸಿಗೆ ವಿಫಲಗೊಂಡಿದ್ದು, ಈವರೆಗೆ ಚಿಕಿತ್ಸೆಗೆಂದು ₹5 ಲಕ್ಷ ಖರ್ಚು ಮಾಡಿದ್ದಾರೆ. ಸದ್ಯ ಮಂಗಳೂರಿನ ಯೆನಪೊಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಚಿಕಿತ್ಸೆಗಾಗಿ ಇನ್ನು ₹7-8 ಲಕ್ಷ ಬೇಕಾಗುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ.



ಆದರೆ ಅಷ್ಟೊಂದು ಮೊತ್ತ ನನ್ನ ಬಳಿ ಇಲ್ಲ. ಹೀಗಾಗಿ ದಾನಿಗಳು ಆರ್ಥಿಕವಾಗಿ ನೆರವು ನೀಡಬೇಕು ಎಂದು ಯುವಕನ ಸಹೋದರ ಭೋವಿ ಶ್ರೀನಿವಾಸ್ ಮನವಿ ಮಾಡಿದ್ದಾರೆ. ನಮ್ಮ ಕುಟುಂಬ ಆರ್ಥಿಕವಾಗಿ ಕಡು ಬಡತನಲ್ಲಿದ್ದು, ಜೀವನ ಸಾಗಿಸುವುದಕ್ಕೆ ಬಹಳ ಕಷ್ಟವಾಗುತ್ತಿದೆ. ತಂದೆ-ತಾಯಿಯ ಆರೋಗ್ಯವು ಹದಗೆಟ್ಟಿದ್ದು, ಚಿಕಿತ್ಸೆ ಕೊಡಿಸುತ್ತಿದ್ದೇನೆ. ಇದೀಗ ನನ್ನ ಸೋದರನ ಆರೋಗ್ಯದಲ್ಲಿ ಸಣ್ಣ ವಯಸ್ಸಿಗೆ ಈ ಕಿಡ್ನಿ ಸಮಸ್ಯೆ ಕಾಣಿಸಿಕೊಂಡಿದ್ದು, ಚಿಕಿತ್ಸೆಗೆ ದಾನಿಗಳು ಹಣಕಾಸಿನ ನೆರವು ನೀಡಬೇಕು ಎಂದು ಮನವಿ ಮಾಡಿದರು.

ನೆರವು ನೀಡಲು ಇಚ್ಛಿಸುವ ದಾನಿಗಳು ಕೆನರಾ ಬ್ಯಾಂಕ್‌ನ ಹರಪನಹಳ್ಳಿ ಶಾಖೆಯ ಖಾತೆ ಸಂಖ್ಯೆ: 06102210103214 (ಯೋಗೀಶ್ ಭೋವಿ), ಐಎಫ್‌ಎಸ್‌ಸಿ ಕೋಡ್- ಸಿಎನ್‌ಆರ್‌ಬಿ0010610 ಅಥವಾ ಫೋನ್ ಪೇ ಸಂಖ್ಯೆ: 9663122344ಗೆ ಹಣ ಪಾವತಿಸಬೇಕು ಎಂದು ಮನವಿ ಮಾಡಿದರು.



ಬಿಎಸ್‌ವೈ ಅಭಿಮಾನೋತ್ಸವಕ್ಕೆ ಬನ್ನಿ

• **ಕನ್ನಡಪ್ರಭ ವಾರ್ತೆ** ಕಂಪ್ಲಿ

ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿ.ಎಸ್.ವೈ. ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ವೀರಶೈವ ಸಂಘದ ಅಧ್ಯಕ್ಷ ಎಸ್.ಎಂ.ನಾಗರಾಜ ತಿಳಿಸಿದರು.

ಪಟ್ಟಣದ ಸಂಘದ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರು ತಮ್ಮ ಹೆಸರುಗಳನ್ನು ಮುಂಚಿತವಾಗಿ ನೋಂದಾಯಿಸಿಕೊಳ್ಳುವಂತೆ ಸಂಘದ ವತಿಯಿಂದ ಸೂಚನೆ ನೀಡಲಾಗಿದೆ. ನೋಂದಣಿಗಾಗಿ ಎಲಿಗಾರ ವೆಂಕಟರೆಡ್ಡಿ (ಮೊ. 98801 02196) ಹಾಗೂ ಎಚ್.ಎಸ್. ವೀರೇಶ್ (ಮೊ. 70193 53636) ಅವರನ್ನು ಸಂಪರ್ಕಿಸಲು ತಿಳಿಸಲಾಗಿದೆ.



ಸಭೆಯಲ್ಲಿ ಪ್ರಮುಖರಾದ ಕೆ.ಎಂ. ಹೇಮಯ್ಯಸ್ವಾಮಿ, ಇಟಗಿ ಬಸವರಾಜಗೌಡ, ಅಳ್ಳಳ್ಳಿ ವೀರೇಶ, ವಾಗೀಶ ಪಂಡಿತಾರಾಧ್ಯ, ಶಿವಪುತ್ರಪ್ಪ ಹೊನ್ನಳ್ಳಿ, ಪುಟ್ಟಿ ಸಚಿನ್, ರೇಣುಕಯ್ಯಸ್ವಾಮಿ ಸೇರಿದಂತೆ ವೀರಶೈವ ಸಂಘದ ಪದಾಧಿಕಾರಿಗಳು ಮತ್ತು ವೀರಶೈವ ಲಿಂಗಾಯತ ಸಮುದಾಯದ ಸದಸ್ಯರು ಉಪಸ್ಥಿತರಿದ್ದರು.

ಯುನೈಟೆಡ್ ಬ್ರೂಯರೀಸ್ ಲಿಮಿಟೆಡ್

Registered office: UB Tower, UB City, #24 Vittal Mallya Road, Bengaluru - 560001.
Phone: 080 - 45655000 Fax: 080 - 22211964, 22229488.
CIN: L36999KA1999PLC025195 Email: ublinvestor@ubmail.com Website: www.unitedbreweries.com

ಮಾರ್ಚ್ 31, 2026 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷಕ್ಕೆ ಕೊನೆಗೊಂಡ ಏಕೀಕೃತ ಹಾಗೂ ಒಟ್ಟುಗೂಡಿಸಿದ ಹಣಕಾಸು ಫಲಿತಾಂಶಗಳ ಪ್ರಕಟಣೆ

(₹. ಲಕ್ಷಗಳಲ್ಲಿ)

ಕ್ರ. ಸಂ.	ವಿವರಗಳು	ಏಕೀಕೃತ				ಒಟ್ಟುಗೂಡಿಸಿದ			
		ತ್ರೈಮಾಸಿಕಕ್ಕೆ ಕೊನೆಗೊಂಡ		ವರ್ಷಕ್ಕೆ ಕೊನೆಗೊಂಡ		ತ್ರೈಮಾಸಿಕಕ್ಕೆ ಕೊನೆಗೊಂಡ		ವರ್ಷಕ್ಕೆ ಕೊನೆಗೊಂಡ	
		ಮಾರ್ಚ್ 31,2026	ಮಾರ್ಚ್ 31,2025	ಮಾರ್ಚ್ 31,2026	ಮಾರ್ಚ್ 31,2025	ಮಾರ್ಚ್ 31,2026	ಮಾರ್ಚ್ 31,2025	ಮಾರ್ಚ್ 31,2026	ಮಾರ್ಚ್ 31,2025
		ಅಪರಿಶೋಧಿತ*		ಪರಿಶೋಧಿತ		ಅಪರಿಶೋಧಿತ*		ಪರಿಶೋಧಿತ	
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	4,41,396	4,43,338	17,50,084	19,43,650	4,41,656	4,43,516	17,50,866	19,44,444
2	ತೆರಿಗೆಗೆ ಮುಂಚಿನ ಅವಧಿಗೆ ನಿವ್ವಳ ಲಾಭ ಮತ್ತು ಅಸಾಧಾರಣ ವಸ್ತುಗಳು	4,201	13,155	50,658	62,911	4,228	13,207	50,698	63,087
3	ತೆರಿಗೆಗೆ ಮುಂಚಿನ ಅವಧಿಗೆ ನಿವ್ವಳ ಲಾಭ ಮತ್ತು ನಂತರ ಅಸಾಧಾರಣ ವಸ್ತುಗಳು	11,605	13,155	56,189	60,335	11,632	13,207	56,229	60,511
4	ತೆರಿಗೆಗೆ ನಂತರದ ಅವಧಿಗೆ ನಿವ್ವಳ ಲಾಭ ಮತ್ತು ನಂತರ ಅಸಾಧಾರಣ ವಸ್ತುಗಳು	10,167	9,738	41,316	44,117	10,187	9,776	41,339	44,241
5	ತೆರಿಗೆಯ ನಂತರದ ಒಟ್ಟು ಸಮಗ್ರ ಆದಾಯ (ಲಾಭವನ್ನು ಒಳಗೊಂಡಿರುತ್ತದೆ ಅವಧಿಗೆ (ತೆರಿಗೆಯ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)	9,718	9,659	42,257	44,356	9,740	9,696	42,282	44,479
6	ಈಕ್ವಿಟಿ ಷೇರು ಬಂಡವಾಳ	2,644	2,644	2,644	2,644	2,644	2,644	2,644	2,644
7	ಮೀಸಲು (ಮರುಮೌಲ್ಯಮಾಪನ ಮೀಸಲು ಹೊರತು ಪಡಿಸಿ)	–	–	4,49,087	4,33,271	–	–	4,49,566	4,33,748
8	ಪ್ರತಿ ಷೇರಿಗೆ ಗಳಿಕೆಗಳು (ಪ್ರತಿಯೊಂದಕ್ಕೆ ರೂ 1/–) (ವಾರ್ಷಿಕವಲ್ಲ)								
	(ಎ) ಮೂಲಭೂತ	3.85	3.69	15.63	16.69	3.85	3.69	15.63	16.71
	(ಬಿ) ಡೈಲ್ಯೂಟೆಡ್	3.85	3.69	15.63	16.69	3.85	3.69	15.63	16.71

*ಸಂಪೂರ್ಣ ಆರ್ಥಿಕ ಫಲಿತಾಂಶಗಳ ಟಿಪ್ಪಣಿ 10ಅನ್ನು ನೋಡಿ.

ಟಿಪ್ಪಣಿ:
(ಎ). ಮೇಲಿನವು 2015ರ ಸೆಬಿ (ಪಟ್ಟಿ ಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಬಂಧನೆಗಳ ನಿಯಮ 33ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಲ್ಲಿಸಲಾದ ತ್ರೈಮಾಸಿಕ ಮತ್ತು ವರ್ಷಾಂತ್ಯದ ಆರ್ಥಿಕ ಫಲಿತಾಂಶಗಳ ವಿವರವಾದ ಸ್ವರೂಪದ ಸಾರಾಂಶವಾಗಿದೆ. ತ್ರೈಮಾಸಿಕ ಮತ್ತು ವಾರ್ಷಿಕ ಆರ್ಥಿಕ ಫಲಿತಾಂಶಗಳ ಪೂರ್ಣ ಸ್ವರೂಪವು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಹಾಗೂ ಕಂಪನಿಯ ವೆಬ್‌ಸೈಟ್ www.unitedbreweries.com ನಲ್ಲಿ ಲಭ್ಯವಿವೆ.
(ಬಿ). ಈ ಕೆಳಗಿನ ಕ್ಯೂ ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಸಂಪೂರ್ಣ ಫಲಿತಾಂಶವನ್ನು ವೀಕ್ಷಿಸಬಹುದು :

ಮಂಡಳಿಯ ಆದೇಶದ ಮೇರೆಗೆ
ಯುನೈಟೆಡ್ ಬ್ರೂಯರೀಸ್ ಲಿಮಿಟೆಡ್ ನ ಪರವಾಗಿ
ಸಹಿ/–
ವಿವೇಕ್ ಗುಪ್ತಾ
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : ಮೇ 05, 2026

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನೀಯರರು(ವಿ), ಕಾ ಮತ್ತು ಪಾ ವೃತ್ತ, ಹುವಿಸಕಂನಿ., ನೆಹರು ನಗರ, ಬೆಳಗಾವಿ–590010.
ದೂರವಾಣಿ ಸಂಖ್ಯೆ: 0831–2470351. ಫ್ಯಾಕ್ಸ ಸಂಖ್ಯೆ: 0831–2472493
Website: www.hescom.co.in,
E-Mail ID: seebgm.hescom@gmail.com
CORPORATE IDENTITY NUMBER(CIN): U31401KA2002SGC030437

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಅಧೀಕ್ಷಕ ಇಂಜಿನೀಯರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ., ಬೆಳಗಾವಿ ರವರಿಂದ ಬೆಳಗಾವಿ ವೃತ್ತ ವ್ಯಾಪ್ತಿಯಲ್ಲಿರುವ 33/11 ಕೆವ್ಹಿ ವಿದ್ಯುತ್ ಉಪ ಕೇಂದ್ರಗಳಲ್ಲಿನ ಪಾಳಿ ಕರ್ತವ್ಯಗಳಿಗೆ ಮತ್ತು ಸಣ್ಣ ಪುಟ್ಟ ನಿರ್ವಹಣಾ ಕಾರ್ಯಗಳಿಗೆ/33ಕೆವ್ಹಿ ಮಾರ್ಗಗಳ ನಿರ್ವಹಣೆಗೆ ಸಿಬ್ಬಂದಿಗಳನ್ನು ಹಾಗೂ ಉಗ್ರಾಣ ಸಹಾಯಕರು/24X7 ಎಚ್‌ಟಿ/ಎಲ್‌ಟಿ ಮಾರ್ಗಗಳ ನಿರ್ವಹಣೆಗೆ ಸಿಬ್ಬಂದಿಗಳನ್ನು/ಲಾರಿ ಚಾಲಕರು/ಭದ್ರತಾ ಸಿಬ್ಬಂದಿಯ ಸೇವೆಗಳನ್ನು ಹೊರಗಿನ ಏಜೆನ್ಸಿಗಳ ಮೂಲಕ **1 ವರ್ಷದ** ಅವಧಿಗೆ ಪಡೆಯಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಸದರಿ ಟೆಂಡರ್‌ಗಳ ಪೂರ್ಣ ವಿವರವನ್ನು ದಿನಾಂಕ: 07.05.2026 ರಂದು ಅಥವಾ ನಂತರ **kppp.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು. ಟೆಂಡರ್‌ಗಳನ್ನು **ದಿನಾಂಕ: 06–06–2026** ರ **ಸಾಯಂಕಾಲ 04:00 ಗಂಟೆಯವರೆಗೆ** ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕೆಳ ಸಹಿದಾರರ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಅಧೀಕ್ಷಕ ಅಭಿಯಂತರರು (ವಿ),
ಕಾ ಮತ್ತು ಪಾ ವೃತ್ತ, ಹುವಿಸಕಂನಿ., ಬೆಳಗಾವಿ

ವಾ.ಸಾ.ಇ./ಧಾರವಾಡ/131/2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ, ಸಂ. 3, ತಾಲ್ಲೂಕು: ಗೋಕಾಕ, ಜಿಲ್ಲಾ: ಬೆಳಗಾವಿ, ರಾಜ್ಯ: ಕರ್ನಾಟಕ, ಪಿನ್ – 591 307, ದೂರವಾಣಿ: 08332–225213.
ಇ–ಮೇಲ್: knnlgrbccd3.gokak@gmail.com

ಸಂಖ್ಯೆ : ಕ.ನೀ.ನಿ.ನಿ./ಜಿ.ಆರ್.ಬಿ.ಸಿ.ಸಿ.ವಿ.–3/ಡಿ.ಬಿ./ಲೆ.ಶಿ.4701 ಎಂ&ಎಂಆಯ್/ಟೆಂಡರ್/2026–27/01 ದಿನಾಂಕ : 05–05–2026

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ
(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ **ಕಾರ್ಯನಿರ್ವಾಹಕ ಅಭಿಯಂತರು, ಕ.ನೀ.ನಿ.ನಿ., ಘ.ಬ.ದಂ.ಕಾ.ನಿ. ವಿಭಾಗ, ಸಂ. 3, ಗೋಕಾಕ ಕಚೇರಿಯಲ್ಲಿ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಶೇಕಡಾವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ ಟೆಂಡರ ಕರೆಯಲಾಗಿದ್ದು, ಕೆ.ಟಿ.ಪಿ.ಪಿ. ಕಾಯ್ದೆಯ ರೂಲ್ 28 ರನ್ವಯ ದ್ವಿ–ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್‌ನ್ನು ದ್ವಿ–ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು.

ಸಾಮಾನ್ಯ ಕಾಮಗಾರಿಗಳು – (02) ಸದರಿ ಕಾಮಗಾರಿಗಳ ಇಂಡೆಂಟ್ ನಂಬರಗಳು : 4409 & 4410. ಟೆಂಡರಿಗಿಟ್ಟ ಇಟ್ಟ ಅಂದಾಜು ಮೊತ್ತವು (ಜಿ.ಎಸ್.ಟಿ. ಹೊರತುಪಡಿಸಿ) ರೂ. 203.34 ಲಕ್ಷ ದಿಂದ ರೂ. 422.01 ಲಕ್ಷಗಳು ಇರುತ್ತವೆ.

ಕಾರ್ಯನಿರ್ವಾಹಕ ಅಭಿಯಂತರರು, ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3, ಗೋಕಾಕ ಕಚೇರಿಯ ಟೆಂಡರ್‌ಗಳನ್ನು ದಿನಾಂಕ : 08–05–2026 ರಿಂದ ದಿನಾಂಕ : 18–05–2026 ರಂದು 16.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ಟೆಂಡರ್ ಪೂರ್ವಭಾವಿ ಸಭೆಯನ್ನು ಈ ಕಚೇರಿಯಯಲ್ಲಿ ದಿನಾಂಕ : 14–05–2026, 11.00 ಗಂಟೆಗೆ ಜರುಗಿಸಲಾಗುವದು. ಟೆಂಡರ್ ಕುರಿತು ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯವು ದಿನಾಂಕ : 15–05–2026, 17.00 ಗಂಟೆಯವರೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ : 18–05–2026 ರಂದು 16.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ದಿನಾಂಕ : 20–05–2026, 11.00 ಗಂಟೆಗೆ ತೆರೆಯಲಾಗುವದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ **https://www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರ್‌ಗಳಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆ.ಪಿ.ಪಿ. ಪೋರ್ಟಲ್ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು, (ಪ್ರಭಾರ)
ಕ.ನೀ.ನಿ.ನಿ., ಜಿ.ಆರ್.ಬಿ.ಸಿ.ಸಿ. ವಿಭಾಗ ನಂ. 3,
ಗೋಕಾಕ.

ಡಿಐಪಿಆರ್/ಬೆಳಗಾವಿ/196/ಮಣಿಪಾಲ್/2026–27

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) (ಕೆಪಿಪಿ ಪೋರ್ಟಲ್ ಮುಖಾಂತರ)

ಸಂಖ್ಯೆ: ಬೆವಿಕಂ/ಮುಪ್ರವ್ಯ(ಯೋ)/ಉಪ್ರವ್ಯ–1/ಸಪ್ರವ್ಯ–1/ಬಿಸಿ–14/26–27/ಸಿವೈಎಸ್–34

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ಸಕ್ರಮಗೊಳಿಸಿದ ಐಪಿ ಸೆಟ್‌ಗಳಿಗೆ 11 ಕೆವಿ ಮಾರ್ಗವನ್ನು ಹಾಗೂ 25 ಕೆವಿಎ ಪರಿವರ್ತಕವನ್ನು ಸ್ಥಾಪಿಸಿ ಮತ್ತು ಎಲ್‌ಟಿ ಮಾರ್ಗಗಳನ್ನು ವಿಸ್ತರಿಸಿ ವಿದ್ಯುತ್ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳಿಗೆ ಶೇಕಡವಾರು ಆಧಾರದಲ್ಲಿ ಭಾಗಶಃ ಗುತ್ತಿಗೆ ಆಧಾರದಲ್ಲಿ (25 ಕೆವಿಎ ಪರಿವರ್ತಕವನ್ನು ಬೆವಿಕಂನಿಂದ ಸರಬರಾಜು ಮಾಡಲಾಗುವುದು) ಈ ಕೆಳಕಂಡ ವಿಚಾರಣಾ ಸಂಖ್ಯೆಗಳಿಗೆ ಟೆಂಡರ್‌ಗಳನ್ನು ಮರು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ವಿಚಾರಣೆ ಸಂಖ್ಯೆ	ಉಪ ವಿಭಾಗದ ಹೆಸರು
1	BESCOM/2025-26/EL/WORK_INDENT878/CALL-2	ಕನಕಪುರ ನಗರ
2	BESCOM/2025-26/EL/WORK_INDENT880/CALL-2	ಯಡಿಯೂರು
3	BESCOM/2025-26/EL/WORK_INDENT881/CALL-2	ಸಾತನೂರು
4	BESCOM/2025-26/EL/WORK_INDENT882/CALL-2	ಬಂಗಾರಪೇಟೆ
5	BESCOM/2025-26/EL/WORK_INDENT889/CALL-2	ಚನ್ನಪಟ್ಟಣ ಗ್ರಾಮೀಣ
6	BESCOM/2025-26/EL/WORK_INDENT890/CALL-2	ತುಮಕೂರು ಗ್ರಾಮೀಣ–2
7	BESCOM/2025-26/EL/WORK_INDENT892/CALL-2	ಗೌರಿಬಿದನೂರು
8	BESCOM/2025-26/EL/WORK_INDENT900/CALL-2	ಹರಿಹರ
9	BESCOM/2025-26/EL/WORK_INDENT908/CALL-2	ತೆಲಗಿ
10	BESCOM/2025-26/EL/WORK_INDENT909/CALL-2	ತಿಪಟೂರು
11	BESCOM/2025-26/EL/WORK_INDENT911/CALL-2	ಹೊಸದುರ್ಗ
12	BESCOM/2025-26/EL/WORK_INDENT913/CALL-2	ಚಿತ್ರದುರ್ಗ ಗ್ರಾಮೀಣ

ಬಿಡ್ ದಸ್ತಾವೇಜುಗಳ ಲಭ್ಯತೆ : 13.05.2026ರ ನಂತರದಲ್ಲಿ. ಬಿಡ್‌ಗೆ ಸಂಬಂಧಿಸಿದ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18.05.2026, 17:00 ಗಂಟೆಯ ಒಳಗೆ. ಬಿಡ್ ಪೂರ್ವಭಾವಿ ಸಭೆಯ ದಿನಾಂಕ : 19.05.2026, 11:00 ಗಂಟೆಗೆ. ಸ್ಥಳ : ಸಭಾ ಕೊಠಡಿ, 3ನೇ ಮಹಡಿ, ಬೆಳಕು ಭವನ, ನಿಗಮ ಕಛೇರಿ, ಕೆ ಆರ್ ವೃತ್ತ, ಬೆವಿಕಂ, ಬೆಂಗಳೂರು–560001. ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 25.05.2026, 15:00 ಗಂಟೆ. ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ : 26.05.2026, 15:30 ಗಂಟೆಗೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಬಿಡ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಹುದು ಹಾಗೂ ಅಗತ್ಯ ನೆರವನ್ನು ಪಡೆದುಕೊಳ್ಳಬಹುದು. ಇ–ಪ್ರೊಕ್ಯೂರ್‌ಮೆಂಟ್ ಸಹಾಯ ಸಂಪರ್ಕ ಸಂಖ್ಯೆ: +91–8046010000, +91–8068948777 ಮತ್ತು ಇ ಮೇಲ್: support@eprochelpdesk.com.

ಆಸಕ್ತ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಬಿಡ್‌ದಾರರು ಕಛೇರಿ ಕೆಲಸದ ಸಮಯದಲ್ಲಿ ಸಹಾಯಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/–ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ) ಯೋಜನೆಗಳು, ಬೆವಿಕಂ.
ಇ ಮೇಲ್: cgmproject.bescom@gmail.com

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

LIC HFL LIC HOUSING FINANCE LTD
1ನೇ ಮಹಡಿ, ಜೀವನ್ ಮಂಗಲ್ ಕಟ್ಟಡ, ಹೇಯ್ಸ್ ರಸ್ತೆ, ಬೆಂಗಳೂರು –560025. ದೂರವಾಣಿ: 080–43003651

ಸ್ವಾಧೀನತೆ ಸೂಚನೆ

ಕೆಳಸಹಿದಾರರು, ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂತರೆಸ್ಟ್ ಆಕ್ಟ್ 2002ರ ಅನ್ವಯ ನಿಯಮ 9ನ್ನು ಓದಿಕೊಂಡಂತೆ ಮತ್ತು ಪ್ರಕರಣ 13(12)ರ ಅನ್ವಯ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನೋಟೀಸಿನ ದಿನಾಂಕದಿಂದ 60 ದಿನಗಳ ಒಳಗೆ ನೋಟೀಸಿನಲ್ಲಿ ತಿಳಿಸಿರುವ ಕೆಳಗೆ ಸೂಚಿಸಿರುವ ಮೊತ್ತವನ್ನು ಪಾವತಿಸಲು ಕೆಳಕಂಡ ಸಾಲಗಾರರಿಗೆ ಕೆಳಗೆ ನಮೂದಿಸಿರುವ ದಿನಾಂಕದಂದು ತಗಾದೆ ಸೂಚನೆ ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವರಿಸದೇ ಇರುವುದರಿಂದ ಈ ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ನಿಯಮ 9ರಲ್ಲಿ ಪ್ರದತ್ತವಾದ ಅಧಿಕಾರದ ಅನ್ವಯ ಪ್ರಕರಣ 13(4)ರ ಆ್ಯಕ್ಟ್ ನಂತೆ ನಿಯಮ 9ನ್ನು ಓದಿಕೊಂಡಂತೆ ಈ ಕೆಳಗೆ ನಮೂದಿಸಿದ ದಿನಾಂಕದಂದು ಸ್ವಾದೀನಪಡಿಸಿಕೊಂಡಿರುತ್ತಾರೆ ಎಂದು ಈ ಮೂಲಕ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸಲಾಗುತ್ತದೆ.

ಸಾರ್ವಜನಿಕರು ಹಾಗೂ ನಿರ್ದಿಷ್ಟವಾಗಿ ಸಾಲಗಾರರು ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಇವರಿಗೆ ಡಿಮ್ಯಾಂಡ್ ನೋಟೋಸಿನ ದಿನಾಂಕದಿಂದ ಸಂದಾಯವಾಗತಕ್ಕದ್ದು ಮೊಬಲಗು ಬಡ್ಡಿ ಪೀನಲ್ ಬಡ್ಡಿ, ಖರ್ಚು ಮತ್ತು ವೆಚ್ಚ ಇವುಗಳಿಗೆ ಋಣಬಾಧ್ಯವಾಗಿರುತ್ತದೆ

ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಭದ್ರಾತಾ ಆಸ್ತಿಗಳನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13(8)ರ ಅನ್ವಯ ಇರುತ್ತದೆ.

ಸಾಲಗಾರರ ಹೆಸರು ಮತ್ತು ಸಾಲದ ಸಂ., ಸ್ವಾಧೀನತೆ ಸ್ವರೂಪ ಮತ್ತು ದಿನಾಂಕ	ಡಿಮ್ಯಾಂಡ್ ನೋಟೀಸ್ ದಿನಾಂಕ	ನೋಟೀಸ್ ಮೊತ್ತ	ಸ್ಥಿರಾಸ್ತಿ ವಿವರಗಳು
ಶ್ರೀಮತಿ ಭಾಗ್ಯಶ್ರೀ ಶ್ರೀ ವೆಂಕಟರಾಮುಡು **4001090000417** **ಸಾಂಕೇತಿಕ ಸ್ವಾಧೀನ ದಿನಾಂಕ 04/05/2026**	**14/03/2025**	**ರೂ. 1308402.00**	**ಶೆಡ್ಯೂಲ್ ಆಸ್ತಿ** ಸೈಟ್ ನಂ.483, ಖಾತಾ ನಂ.523/483, ಆಸ್ತಿ ನಂ.3521810726 ರ ಎಲ್ಲಾ ಭಾಗಗಳು, ಪರಿವರ್ತಿತ ಭೂಮಿ, 7–98, 840/**ಬಿ1ಎ** ವಿಸ್ತೀರ್ಣ 7–93, 840**ಬಿ1/ಬಿ** ವಿಸ್ತೀರ್ಣ 10 ಎಕರೆ ಒಟ್ಟು 25.91 ಎಕರೆ ವಿಸ್ತೀರ್ಣ, ಪೂರ್ವದಿಂದ ಪಶ್ಚಿಮಕ್ಕೆ 15 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 9 ಮೀಟರ್ ಅಳತೆಯ ಪ್ಲಾಟ್, ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಗ್ರಾಮದಲ್ಲಿದೆ, ಪೂರ್ವಕ್ಕೆ: 9 ಮೀಟರ್ ರಸ್ತೆ, ಪಶ್ಚಿಮಕ್ಕೆ: 470, ಉತ್ತರಕ್ಕೆ: 484, ದಕ್ಷಿಣಕ್ಕೆ: 482.

ಸ್ಥಳ: ವಿಜಯನಗರ
ದಿನಾಂಕ: 07.05.2026

ಸಹಿ/– ಅಧಿಕೃತ ಅಧಿಕಾರಿ
ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಚಿನ್ನದ ಹರಾಜಿನ ನೋಟಿಸ್

ಬಜಾಜ್ ಫೈನಾನ್ಸ್ ಲಿಮಿಟೆಡ್ ("BFL");
ರಿಜಿಸ್ಟರ್ಡ್ ಆಫೀಸ್: ಮುಂಬೈ – ಪುಣೆ ರೋಡ್, ಅಕುರ್ಡಿ, ಪುಣೆ 411035
BAJAJ FINANCE

ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ ಎಂದರೆ ಈ ಕೆಳಗೆ ಉಲ್ಲೇಖಿಸಿರುವ ಸಾಲಗಾರರಿಗೆ ಇದುವರೆಗೂ ಹಲವು ಸೂಚನೆಗಳನ್ನು ನೀಡಿದರೂ ಸಹ, ಅವರು ಸಾಲವನ್ನು ಮರುಪಾವತಿಸಲು ಅಥವಾ ಅಗತ್ಯ ಮಾರ್ಜಿನ್ ಒದಗಿಸಲು ವಿಫಲರಾಗಿರುವ ಕಾರಣದಿಂದ, ಸಾಲದ ಭದ್ರತೆಗಾಗಿ ಸಾಲಗಾರ (ರು) ನೀಡಿರುವ ಚಿನ್ನವನ್ನು "ಹೇಗಿದೆಯೋ ಹಾಗೆಯೇ" (As is where is basis) ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಂತೆ ಹರಾಜು ಮಾಡಲಾಗುತ್ತಿದೆ.

1. ಸಾರ್ವಜನಿಕ ನೋಟಿಸ್ ನ ಪೂರ್ಣ ವಿವರಗಳನ್ನು ಪಡೆಯಲು QR ಕೋಡ್ ಸ್ಕ್ಯಾನ್ ಮಾಡಿ. (ಚಿನ್ನದ ವಿವರಗಳು & ಒಟ್ಟು ತೂಕ), 2. ಸಂಪೂರ್ಣ ಬಿಡ್ಡರ್ ನಿಯಮಗಳು http://172.30.1.235:3000/?WOUB2QG9WU ನಲ್ಲಿ ಲಭ್ಯವಿದೆ 3. ಬಿಡ್ಡರ್‌ಗಳು ಹರಾಜಿನ ಸಮಯದಲ್ಲಿ ಅಥವಾ ಮೊದಲು ಆನ್‌ಲೈನ್ ವರ್ಗಾವಣೆಯ ಮೂಲಕ ₹25,000/– ಗಳ ಅರ್ನೆಸ್ಟ್ ಮನೀ ಠೇವಣಿ (EMD) ಇಡಬೇಕು; 4. ಗುರುತಿನ ಚೀಟಿ ಮತ್ತು ವಿಳಾಸದ ಮಾನ್ಯ ಪುರಾವೆಯೊಂದಿಗೆ, ಬೆಳಿಗ್ಗೆ 10 ಗಂಟೆಗೆ ಹರಾಜು ಸ್ಥಳದಲ್ಲಿ ವೈಯಕ್ತಿಕ ಹಾಜರಾತಿ, ಕಡ್ಡಾಯವಾಗಿದೆ.

ಹರಾಜು ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು ಹರಾಜು ಕೇಂದ್ರದಲ್ಲಿ ಡಿಸ್‌ಪ್ಲೇ ಮಾಡಲಾಗುತ್ತದೆ. ಬಿಡ್ ಸಲ್ಲಿಸುವಾಗ ಮೇಲಿನ ನಿಯಮಗಳು ಸ್ವೀಕಾರವಾಗಿದೆ ಎಂದು ಪರಿಗಣಿಸಲಾಗುವುದು. ಯಾವುದೇ ವಿವರಗಳಿಗೆ ಸಂಪರ್ಕಿಸಿ: wecare@bajajfinserv.in

(10-06-26) ಅಜ್ಜಂಪುರ – ಹೊಸದುರ್ಗ ರೋಡ್; PKC4SGL15253971, 17470728, 17769781. ಬಾಗಲ್‌ಕೋಟ್ – ವಿದ್ಯಗಿರಿ; PGC8SGL17661591, 17702375, 17755134, 17794641, 18048192, 18056841, 18049642, 18054405, 18048858, 18046674, 18053307, 18051417, 18050827, 18032826, 18067151, 18297027. ಬೆಂಗಳೂರು – ಎಚ್‌ಎಸ್‌ಆರ್ ಲೇಔಟ್; PEX2SGL12315289. ಬಸವಕಲ್ಯಾಣ್ – ಹರಲಯ್ಯ ಸರ್ಕಲ್; PER8SGL17428228, 17550798, 17626273, 17758690, 17793725. ಬೆಳಗಾಮ್ – ರಾಮ್‌ಲಿಂಗ್ ಖಿಂಡ್ ಗಲ್ಲಿ; PBY3SGL17467496, 17533859. ಬಳ್ಳಾರಿ – ಆರ್‌ಟಿಎಚ್; PBY4SGL17494060, 17760535, 17845298, 17843873, 17846355, 17845573. ಬೀದರ್ – ಅಂಬೇಡ್‌ಕರ್ ಸರ್ಕಲ್; P87QSGL17838516, 18043577, 18083824. ಬಿಜಾಪುರ್ – ಬಾಗಲ್‌ಕೋಟ್ ರೋಡ್; PLE1SGL17727127. (11-06-26) ದೊಡ್ಡಬಳ್ಳಾಪುರ – ಡಿ ಕ್ರಾಸ್ ರೋಡ್; PGH5SGL11987862, 12200643, 17726784, 17954035. ಗೌರಿಬಿದನೂರ್ – ಹಿಂದೂಪುರ ರೋಡ್; PMK3SGL17561942. ಗೋಕಾಕ್ – ಹೊಸ್‌ಪೇಟ್ ಗಲ್ಲಿ; PBZ2SGL17637050, 18037715, 18042158, 18093574, 18216130. ಗುಬ್ಬಿ – ಬಿಎಚ್ ರೋಡ್; POI9SGL17652889. ಗುಲ್‌ಬರ್ಗ – ಜೇವರ್ಗಿ ಬಸ್ ಸ್ಟಾಂಡ್; PMS6SGL17831436, 18022432. ಗುಲ್‌ಬರ್ಗ – ಸೂಪರ್ ಮಾರ್ಕೆಟ್; P12ISGL17960011, 18054193. ಗುಲ್‌ಬರ್ಗ – ಎಸ್‌ವಿಪಿ ಚೌಕ್; PGH6SGL17424262, 17418664, 17446372, 17628774, 17774200. ಹಡಗಲಿ – ಹರಪನಹಳ್ಳಿ ರೋಡ್; PLM6SGL17499124, 17635298, 17688577, 17990714. ಹಗರಿಬೊಮ್ಮನಹಳ್ಳಿ – ಹೊಸ್‌ಪೇಟ್ ರೋಡ್; PKD5SGL17573581, 17697551, 17968260. (12-06-26) ಬಿಜಾಪುರ್ – ಸರಾಫ್ ಬಜಾರ್; PBY6SGL15146421, 15146900, 16254186, 16392769, 17477246, 17548409, 17618481, 17720298, 17723396, 17766981, 17791405, 17792625, 17835045, 17835647, 17873005, 17876974, 17949125, 17963084, 18025295, 18020715, 18075660, 18149676, 18238035. ಬ್ಯಾಡಗಿ – ಬಸ್ ಸ್ಟಾಂಡ್ ಸರ್ಕಲ್; PK03SGL16642149, 17505188, 17957413. ಚನ್ನಗಿರಿ – ಪಿಡಬ್ಲ್ಯುಡಿ ಶಿಮೋಗಾ ಮೈನ್ ರೋಡ್; PKK2SGL17452772, 17842973. ಚನ್ನರಾಯಪಟ್ಟ – ಕಾಳೇನಹಳ್ಳಿ ರೋಡ್; PLM9SGL17796809, 17948156. ಚಿಕ್ಕಬಳ್ಳಾಪುರ್ – ಬೀರಪ್ಪ ಸ್ಟ್ರೀಟ್; PE05SGL12174472, 12718234, 12819584, 13162800, 13163281, 13257175, 13903851, 17863355, 18020601. ಚಿತ್ರದುರ್ಗ – ಮೇಧೆಹಳ್ಳಿ ರೋಡ್; PBY8SGL17896568. ದಾವಣಗೆರೆ – ಪಿ ಬಿ ರೋಡ್; PNS2SGL17531826, 17728913. ಧಾರವಾಡ್ – ಎನ್‌ಟಿಟಿಪಿ; PBY9SGL15119713, 17394116, 17878827, 18234528. ಧಾರವಾಡ್ – ಸವದತ್ತಿ ರೋಡ್; PMJ6SGL17575562, 17960979. (15-06-26) ಹಂಗಲ್–ಟಿಜಿ ರೋಡ್; PMJ8SGL16321482, 16475630, 17478733, 17481715, 17658074, 17722510, 17923410, 18232492. ಹರ್ಪನಹಳ್ಳಿ – ಬಿಜಿಎಲ್; PX14SGL17473407, 17754593. ಹಾಸನ್ – ಎನ್‌ಆರ್ ಸರ್ಕಲ್; PE06SGL15174008, 16590213, 17692042, 17692743, 18092517, 18113689, 18144585. ಹಾವೇರಿ – ಬಸ್ ಸ್ಟಾಂಡ್; PBZ3SGL16370223, 17400104, 17474348, 17636547, 17797549, 17827686, 17861430, 17963413, 17946884. ಹಿರಿಯೂರ್ – ಮೈನ್ ರೋಡ್; PMK6SGL17694613, 17691511. ಹೊಳಕೆರೆ – ಶಿಮೋಗಾ ರೋಡ್; PLP7SGL17757020, 18121299. ಹೊಸದುರ್ಗ – ಹುಲಿಯಾರ್ ರೋಡ್; PEX1SGL17571054, 17631736, 17953055, 18073553, 18236484, 18237365. ಹೊಸ್‌ಕೋಟೆ – ಕೆಈಬಿ ಸರ್ಕಲ್; PLG1SGL17791105, 18119652. (16-06-26) ಹೊಸ್‌ಪೇಟ್ – ಶಾನ್‌ಬಾಗ್ ಸರ್ಕಲ್; PBZ4SGL17397483, 17660885, 17766945. ಹುಬ್ಬಳ್ಳಿ – ವಿಕ್ಟೋರಿಯಾ ರೋಡ್; PBZ5SGL12126087, 17902737. ಹುಲಿಯಾರ್ – ಬಿ ಎಚ್ ರೋಡ್; PLM1SGL17456590, 17670591. ಕಡೂರ್ – ಚೆಕ್ ಪೋಸ್ಟ್ ಸರ್ಕಲ್; PIZ6SGL17571660. ಕನ್ನೂರ್ ಕೆವಿ; PET2PRN17831604, 18208746. ಕಾರ್ಕಳ – ಮಾರ್ಕೆಟ್ ರೋಡ್; PNV5SGL17700685, 18006822. ಕಾರ್‌ವಾರ್ – ಬಿಜಿಎಲ್; PNR8SGL17620177, 17636265. ಕೆಂಗೇರಿ – ಎಂಭತ್ತು ಅಡಿ ರಸ್ತೆ; PBZ6SGL12001886, 17391526, 17804008, 17942959, 18124680. (17-06-26) ಕೋಲಾರ್ – ಎಂ ಬಿ ರೋಡ್; PGH7SGL15193730, 17719689. ಕೊಳ್ಳೆಗಲ್ – ವಾಟರ್ ವರ್ಕ್ಸ್ ರೋಡ್; PMS3SGL17477789. ಕೊಟ್ಟೂರ್ – ಮೈನ್ ರೋಡ್; PLN4SGL13854976, 16188520, 16520976, 17619694, 17840472. ಕೂಡ್ಲಿಗಿ – ಹೊಸಳ್ಳಿ ರೋಡ್; PLD9SGL16443318, 17408900, 17451449, 17533544, 17529869, 17836505, 17940938, 18026155, 18138794, 18318186. ಕುಕ್ನೂರ್; PA31PRN17824521. ಲಿಂಗಸುಗೂರ್ – ರಾಯ್‌ಚೂರ್ ರೋಡ್; PBZ7SGL13355208. ಮದ್ದೂರ್ – ಕೊಲ್ಲಿ ಸರ್ಕಲ್; PCZ8SGL18206468. ಮಧುಗಿರಿ – ಟಿವಿವಿ ಸರ್ಕಲ್; PLM7SGL17688605. (18-06-26) ಮಾನ್ವಿ – ಸಿಂಧನೂರ್ ರೋಡ್; PPA6SGL17546126, 17800939, 18151590. ಮೂಡಲಗಿ; P28APRN17654826. ಮೈಸೂರ್ – ನಾರಾಯಣ ಶಾಸ್ತ್ರಿ ರೋಡ್; PGH8SGL17452599. ಮೈಸೂರ್ – ಸರಸ್ವತಿಪುರಂ; PBZ8SGL17697269. ಮೈಸೂರ್ – ವಿವೇಕಾನಂದ ನಗರ್; PED7SGL17955205, 18145454. ನಂಜನ್‌ಗೂಡ್ – ಎಂಜಿಎಸ್ ರೋಡ್; PBZ9SGL17533964, 17533215, 17806735, 17903975, 17905915, 18020776, 18153508. ರಾಯ್‌ಚೂರ್ – ಗಂಜ್ ಮೈನ್ ರೋಡ್; PEP2SGL17457855, 18220545. ರಾಮನಗರ – ರೈಲ್ವೇ ಸ್ಟೇಷನ್ ರೋಡ್; PEH1SGL11686332, 17863276, 18155567, 18222153, 18305644. (19-06-26) ರಾಣೇಬೆನ್ನೂರ್ – ಪಿಬಿ ರೋಡ್; PGI1SGL12312434, 15092106, 16393735, 17403560, 17499069, 17547400, 17580935, 17767138, 17770726, 17998459, 17991045, 18072727, 18121837, 18113746. ಶಾಹಪೂರ್ – ಬಸ್ ಸ್ಟಾಂಡ್ ರೋಡ್; PIZ9SGL17459991, 17723204, 17986954. ಶಿಗ್ಗಾಂವ್ – ಬಸ್ ಸ್ಟಾಂಡ್ ರೋಡ್; PPV1SGL18030606. ಸಿಂದಗಿ – ವಿಜಯಪುರ್ ರೋಡ್; PET1PRN12791265, 17870833. ತಾಂಬಾ; PET4PRN17546485, 17745098, 17896539, 17987808, 18081102, 18228943. ತಾವರಗೇರಾ; PK46PRN18085497. ತಿಪ್ಟೂರ್ – ಬಿ ಎಚ್ ರೋಡ್; PG07SGL17565450. ತುಮ್ಕೂರ್ – ಬಿ ಎಚ್ ರೋಡ್; PEL1SGL17546849, 18074715.

ಬಜಾಜ್ ಫೈನಾನ್ಸ್ ಲಿಮಿಟೆಡ್

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ – ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್–05/2026/1338 ದಿ:04.05.2026

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: 13.05.2026ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824–2440720)

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

DIPR/DK/KSMCA/179/26-27 dt. 06.05.2026

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ:ಮು.ಪ್ರ.ವ್ಯ.(ತಾ)/ಉ.ಪ್ರ.ವ್ಯ(ಎಪಿಸಿಸಿ&ಪ್ರೊ)/ಕಾನಿಇಂ–4/ಸ.ಕಾ.ನಿ.ಇಂ–5/2026–27/594–623 **ದಿನಾಂಕ:06.05.2026**

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಗಳ ವಿವರ

ಕವಿಪ್ರನಿನಿ/2026–27/ಎಸ್‌ಎಸ್/ವರ್ಕ್_ಇಂಡೆಂಟ್3608

ಕೆಳಕಂಡ ಕಾಮಗಾರಿಗಳು ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ:

ಕಾಮಗಾರಿ–ಎ:1. ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ 400/220ಕೆವಿ ಗುತ್ತೂರು ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ವಿದ್ಯುತ್ ಶಕ್ತಿ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

2.0.12ಕಿಮೀ. ಉದ್ದದ 220ಕೆವಿ ಒಂಟಿ ವಿದ್ಯುತ್ ಮಾರ್ಗವನ್ನು ಜೋಡಿ ಗೋಪುರಗಳ ಮೇಲೆ ಡ್ರೇಕ್ ವಾಹಕವನ್ನು ಉಪಯೋಗಿಸಿ ನಿರ್ಮಾಣ ಮಾಡುವ ಕಾಮಗಾರಿ.

3.ಅಸ್ತಿತ್ವದಲ್ಲಿರುವ 400/220ಕೆವಿ ಗುತ್ತೂರು ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ನವೀಕರಣ ಮತ್ತು ಆಧುನೀಕರಣ ಮಾಡುವ ಕಾಮಗಾರಿ.

ಕಾಮಗಾರಿ–ಬಿ: ಗದಗ ಜಿಲ್ಲೆ, ಮುಂಡರಗಿ ತಾಲ್ಲೂಕಿನ 400/220/33ಕೆವಿ ಡೋಣಿ ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT) ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

ಕಾಮಗಾರಿ–ಸಿ: ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕಿನ 400/220ಕೆವಿ GIS/AIS ಹಿರೇಮಲ್ಲನಹೊಳೆ (Jagaluru) ಸ್ವೀಕರಣಾ ಕೇಂದ್ರದಲ್ಲಿ 1x500ಎಂವಿಎ, 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT) ವಿದ್ಯುತ್ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.

ಕಾಮಗಾರಿ–ಡಿ: ಕಲಬುರಗಿ ಜಿಲ್ಲೆ ಮತ್ತು ತಾಲ್ಲೂಕಿನ **400/220ಕೆವಿ ಫಿರೋಜಾಬಾದ್** ಸ್ವೀಕರಣಾ ಕೇಂದ್ರದಲ್ಲಿ **1x500ಎಂವಿಎ,** 400/220/33ಕೆವಿ ಹೆಚ್ಚುವರಿ ಇಂಟರ್ ಕನೆಕ್ಟಿಂಗ್ (ICT)ಶಕ್ತಿ ಪರಿವರ್ತಕವನ್ನು ಮತ್ತು **1X125 ಎಂವಿಎಆರ್ ಹೆಚ್ಚುವರಿ ಬಸ್ ರಿಯಾಕ್ಟರ**ನ್ನು ಅಳವಡಿಸುವ ಕಾಮಗಾರಿ.

ಕಾಮಗಾರಿ–ಇ: ಬೆಂಗಳೂರು ಜಿಲ್ಲೆ ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನ 400/220ಕೆವಿ ದೊಮ್ಮಸಂದ್ರ ಸ್ವೀಕರಣಾ ಕೇಂದ್ರದಲ್ಲಿ 1X125 ಎಂವಿಎಆರ್ ಹೆಚ್ಚುವರಿ ಬಸ್ ರಿಯಾಕ್ಟರನ್ನು ಅಳವಡಿಸುವ ಕಾಮಗಾರಿ.

ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಅಳವಡಿಸುವ (ಕಳಚುವುದು ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 07.05.2026** ರಂದು ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 22.05.2026. @ 15.00 ಗಂಟೆ.**

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ನಿಗಮ ಕಛೇರಿ, 11ನೇ ಮಹಡಿ, ಕವಿಪ್ರನಿನಿ,
ಇಂಧನ ಭವನ, ಎ.ಆರ್.ವೃತ್ತ, ಬೆಂಗಳೂರು–560 009.